# ಸ್ಪಂದನ

# (ದೀಪಾವಳಿ ವಿಶೇಷಾಂಕ -೦೨)

## ಪರಿವಿಡಿ


ಸಂಪಾದಕೀಯ....................................................................2
ನನ್ನ ಶಾಲಾ ದಿನಗಳು .........................................................3
ಬ್ಯಾಸ್ಗಿ ಸೂಟಿ ..................................................................5
ಇಂಟರಸಿಟಿ ಕೊರೆತ.... ಇದು ಕಥೆಯಲ್ಲ ..........................................8
ಜ್ಯೋತಿಷ್ಯದಲ್ಲಿ ನಂಬಿಕೆ ಅತೀಯಾಗಿದೆಯೇ? .......................................10
ವಿಜ್ಞಾನಿಗಳಿಂದ ಅಜ್ಞಾನಿಗಳಿಗೊಂದು ಪತ್ರ ...........................................12
ಮಧುರ ನೆನಪುಗಳು ..........................................................14
ಒಂದು ಕ್ರಾಂತಿಕಾರೀ ವಿಚಾರ .................................................15
ಆಶ್ಚರ್ಯ.......................................................................17
ವಿಧಿ ...........................................................................18
ಅ(ನ)ಂಟು......................................................................19
ಮೌಸಾಸುರ ಮರ್ದನ ಪ್ರಸಂಗ.................................................20
ಸಾಗರದಲ್ಲಿ ಹುಟ್ಟು ಹಾಕುವ ಮುನ್ನ.......ಕೆಲವು ಪ್ರಶ್ನೆಗಳು!! ...........................22
ನನ್ನ ವೃದ್ಧ ಮಿತ್ರ ...........................................................25
ಕೇಳ್ರಪ್ಪೋ ಕೇಳ್ರಿ...............................................................26

# ಸಂಪಾದಕೀಯ

ಎಲ್ಲರಿಗೂ ದೀಪಾವಳಿಯ ಶುಭಾಶಯಗಳು.

೧೯೯೫ ರ ನವ್ವೆಂಬರ್‌ನ ಒಂದು ಮಧ್ಯಾಹ್ನ ಧಾರವಾಡದಲ್ಲಿ ಶ್ರೀ ಎನ್ಕೆಯವರ ಶುಭ ಹಾರೈಕೆಯೊಂದಿಗೆ ಆರಂಭಗೊಂಡಿತು ಪುಟ್ಟ ಕನ್ನಡ ವೇದಿಕೆ. ಎಸ್.ಡಿ.ಎಂ.ಇಂಜಿನೀಯರಿಂಗ್ ಕಾಲೇಜ್‌ನಲ್ಲಿ ಸಣ್ಣದಾಗಿ ಆರಂಭವಾದ ವೇದಿಕೆ, ಕೇವಲ ಒಂದೆರಡು ವರ್ಷಗಳಲ್ಲಿ ಕಾಲೇಜಿನ ಪ್ರಮುಖ ಸಾಂಸ್ಕೃತಿಕ ವೇದಿಕೆಯ ರೂಪ ತಾಳಿತು.ನಮ್ಮೆಲರ ಪಠ್ಯೇತರ ಚಟುವಟಿಕೆಗಳ ಮುಖವಾಣಿಯಾಗಿ, ಎಲ್ಲರನ್ನೂ ಒಂದೆಡೆ ಹಿಡಿದಿಟ್ಟಿತು ನಮ್ಮೀ ವೇದಿಕೆ. ಎಲ್ಲಾ ಕಾರ್ಯಕ್ರಮಗಳಿಗೆ ಸ್ಫೂರ್ತಿಯಾಗಿದ್ದ ಕಮಲಾಪುರ ಸರ್[1]ನ್ನು ಈ ಸಂದರ್ಭದಲ್ಲಿ ನೆನೆಯಬೇಕು. ಭಾಷಣ, ಚರ್ಚೆ,ಕವಿಗೋಷ್ಠಿ, ಗಾಯನಸ್ಪರ್ಧೆ ಇತ್ಯಾದಿಗಳ ಮಧ್ಯೆ ಮುಳುಗಿಹೋಗಿದ್ದ ನಾವೆಲ್ಲಾ ಕಾಲೇಜಿನಿಂದ ಹೊರಬಿದ್ದಾಗ 'ನೀರಿನಿಂದಾಚೆ ತೆಗೆದ ಮೀನಾಗಿದ್ದೆವು'.

ಹೊಟ್ಟೆಪಾಡು ಎಲ್ಲರನ್ನೂ ತಂದು ಬೆಂಗಳೂರಲ್ಲಿ ಒಟ್ಟು ಹಾಕಿದಾಗ ಪುನಃ ಹುಟ್ಟಿದ್ದು ಕನ್ನಡ ವೇದಿಕೆ ಯಾಹೂ ಗ್ರೂಪ್!.[2] ಈ ಗ್ರೂಪ್ ನಮ್ಮೆಲ್ಲರನ್ನೂ ಅಗೊಮ್ಮೆ , ಇಗೊಮ್ಮೆ ವಿದ್ಯಾರ್ಥಿಲೋಕದತ್ತ[3] ಕರೆದೊಯ್ಯುತ್ತದೆ.

ತಮ್ಮ ಕೋಡಿಂಗ್, ಟೆಸ್ಟಿಂಗ್, ಡಿಸೈನ್ ಇತ್ಯಾದಿಗಳ ಮಧ್ಯೆ ಬರೆಯುವದನ್ನು ಮರೆತವರಿಗೆ ಇದೊಂದು ಹೊಸ ಅನುಭವ.ಇಲ್ಲಿಯ ಲೇಖನಗಳು ನಿಮಗೆ ಸ್ವಲ್ಪವಾದರೂ ಮುಗುಳ್ನಗೆ ತರಿಸಿದಲ್ಲಿ ನಮ್ಮ ಪ್ರಯತ್ನ ಸಾರ್ಥಕ.ನಿಮಗೆ ಈ ಲೇಖನಗಳು ಸಂತೋಷ ನೀಡಿದಲ್ಲಿ ನಿಮ್ಮ ಮಿತ್ರರ ಮಧ್ಯೆ ಹಂಚಿಕೊಳ್ಳಲು ಯಾವುದೇ ನಿರ್ಬಂಧವಿಲ್ಲ. ನಿಮ್ಮ ಅನಿಸಿಕೆ (spandana_feedback@yahoo.com) ಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುವಿರಾಗಿ ಬಯಸುವೆವು.

---

1.ಮತ್ತು 3 : ಕೆಲವು ಫೋಟೋಗಳನ್ನು ನೋಡಿ :
http://photos.yahoo.com/bc/spandana_feedback/lst?.dir=/Vedike&.view=t

2.ನಮ್ಮ ಗ್ರುಪ್ : http://groups.yahoo.com/group/Kannada_vedike/

# <u>ನನ್ನ ಶಾಲಾ ದಿನಗಳು</u>

– ಮಂಗಳಾ ಭಟ್

"ಮನೆಯೆ ಮೊದಲ ಪಾಠಶಾಲೆ ಜನನಿ ತಾನೆ ಮೊದಲ ಗುರುವು ಜನನಿಯಿಂದ ಪಾಠ ಕಲಿತ ಜನರು ಧನ್ಯರು" ಎಂದು ಹಾಡಿನಲ್ಲಿ ಹೇಳಿರುವಂತೆ ನನ್ನ ಅಕ್ಷರಾಭ್ಯಾಸ ತಾಯಿಯ ಅಕ್ಕರೆಯ ಮಡಿಲಲ್ಲಿ, ಮನೆಯವರೆಲ್ಲರ ಪ್ರೋತ್ಸಾಹ ಹಾಗು ಮಾರ್ಗದರ್ಶನದಲ್ಲಿ ಪ್ರಾರಂಭವಾಯಿತು. ಇನ್ನು ನನ್ನ ಶಾಲಾ ದಿನಗಳನ್ನು
ನಾಲ್ಕು ಹಂತಗಳಲ್ಲಿ ವಿವರಿಸಿದರೆ ಹೆಚ್ಚು ಸಮಂಜಸವೆನಿಸುತ್ತದೆ.

ಅ) ಅಂಗನವಾಡಿಯಲ್ಲಿ

ಬ) ಪೂರ್ವ ಪ್ರಾಥಮಿಕ ಶಾಲಾ ದಿನಗಳು.

ಕ) ಪ್ರಾಥಮಿಕ ಶಾಲಾದಿನಗಳು,

ಡ) ಮಾಧ್ಯಮಿಕ ಶಾಲಾದಿನಗಳು.

ನಾನು ನನ್ನ ಜೀವನದಲ್ಲಿ ಅತ್ಯಂತ ಇಷ್ಟಪಡುವ, ಅವಿಸ್ಮರಣೀಯ ದಿನಗಳೇ ನನ್ನ ಮೂರು ವರ್ಷಗಳಿಂದ ಆರು ವರ್ಷಗಳ ವರೆಗೆ ಅಂಗನವಾಡಿಯಲ್ಲಿ ಕಳೆದ ದಿನಗಳು. ಅಂಗನವಾಡಿ ಇದ್ದಿದ್ದು ನಮ್ಮ ಮನೆಯಿಂದ ಎರಡು
ಫ಼ರ್ಲಾಂಗ್ ದೂರದಲ್ಲಿ. ಹೋಗುವಾಗ ಹಳ್ಳ ಬೇರೆ ದಾಟಿ ಹೋಗಬೇಕು. ಪುಟ್ಟ ತಮ್ಮನ ಕೈ ಹಿಡಿದು ಗೆಳತಿಯರೊಂದಿಗೆ ಹೋಗುವುದೆ ಒಂದು ಖುಶಿ. ಅದರಲ್ಲೂ ಮಳೆಗಾಲದಲ್ಲಂತು ಯಾವ ಹೊಂಡ ತಗ್ಗುಗಳನ್ನೂ ಬಿಡದೆ ನೀರಾಟ ಆಡಿ ಮನೆಯಲ್ಲಿ ಬಯ್ಯಿಸಿಕೊಂಡಿದ್ದು ಸಾಮಾನ್ಯ ಸಂಗತಿ. ಮಳೆ ತುಂಬಾ ಬಂದರೆ ಯಾರಾದರು ಹಿರಿಯರು ಹಳ್ಳ ದಾಟಿಸಿ ಕಳುಹಿಸಿ ಕೊಡಬೇಕು. ಕಳುಹಿಸಿ ಕೊಡದಿದ್ದರೆ ಅತ್ತು, ರಂಪ ಮಾಡಿ ಆದರೂ ಹೋಗಲೇ ಬೇಕು. ಅಲ್ಲಿನ ಶಿಕ್ಷಕಿ ವತ್ಸಲಾ ರವರ ತಾಳ್ಮೆ ಮೆಚ್ಚುವಂತದ್ದು.

ಶಾಲಾದಿನಗಳ ಎರಡನೆ ಹಂತ ಒಂದನೆ ತರಗತಿಯಿಂದ ನಾಲ್ಕನೆ ತರಗತಿ ಯವರೆಗಿನ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಕಳೆದ ದಿನಗಳು. ಮನೆಯಿಂದ ಕೂಗಳತೆಯ ದೂರದಲ್ಲಿ ಇದ್ದ ಒಂದೇ ಕೊಠಡಿಯ ಪುಟ್ಟ ಶಾಲೆ ನನಗೆ ಈಗಲೂ ತುಂಬಾ ಇಷ್ಟ. ಕೇವಲ ೧೫ ವಿದ್ಯಾರ್ಥಿಗಳಷ್ಟೆ ಇದ್ದುದರಿಂದ ಪ್ರತಿಯೊಬ್ಬರ ಪ್ರಶ್ನೆಗಳಿಗೂ ಸೂಕ್ತ ಉತ್ತರ ದೊರೆಯುತ್ತಿತ್ತು. ಬಹುಶಃ ನಾನು ಈ ಮಟ್ಟ ತಲುಪಲು ನನ್ನ ಗುರುಗಳು ಅಲ್ಲಿ ಮಾಡಿದ ಪಾಠಗಳೇ ಕಾರಣ. ಅವರ ಗಣಿತ ವಿಷಯದಲ್ಲಿನ ಜ್ಞಾನ ಅಪಾರ. ನಾನು ಬಹಳ ನೆನಪಿಸಿಕೊಳ್ಳುವ ಘಟನೆ ಎಂದರೆ ಗುರುಗಳು ನನ್ನ ಹಾಗು ನನ್ನ ಗೆಳತಿಯ ಜಡೆಯನ್ನು ಹಿಂದಿನಿಂದ ಒಟ್ಟಿಗೆ ಕಟ್ಟಿ ಮೂರು ಘಂಟೆಗಳ ಕಾಲ ಶಾಲೆಯಲ್ಲಿ ಕೂರಿಸಿದ್ದು. ಇದು ಯಾವುದಕ್ಕೆ ಶಿಕ್ಷೆ ಎಂದು ಊಹಿಸಬಲ್ಲಿರಾ? ತರಗತಿಯಲ್ಲಿ ತುಂಬಾ ಮಾತನಾಡಿ ಗಲಾಟೆ ಮಾಡಿದ್ದಕ್ಕಾಗಿ!!!. ನಾನು ಅಲ್ಲಿ ಕಳೆದ ಪ್ರತಿಯೊಂದು ಕ್ಷಣವೂ ಚಿರಸ್ಮರಣೀಯ. ಈಗಲೂ ಊರಿಗೆ ಹೋದಾಗ ಶಾಲೆಯಲ್ಲಿ ನನ್ನ ಜೊತೆ ಓದಿದ ಗೆಳತಿಯರು ಸಿಕ್ಕರೆ

ಶಾಲೆಗೆ ಭೇಟಿ ಕೊಟ್ಟು ಅಲ್ಲಿ ಕಳೆದ  ಕ್ಷಣಗಳನ್ನು ನೆನಪಿಸಿಕೊಳ್ಳುತ್ತೇವೆ.

ಪ್ರಾಥಮಿಕ ಶಾಲೆಯಲ್ಲಿನ ದಿನಗಳನ್ನು ನಾನು ಇಷ್ಟಪಡುವುದಿಲ್ಲ. ಅದಕ್ಕೆ ಮುಖ್ಯ ಕಾರಣ  ಸರಿಯಾಗಿ ಪಾಠ ಮಾಡದೆ ಇದ್ದಿದ್ದು. ಆದರೆ ತರಗತಿಯಲ್ಲಿ ಮಾವಿನಕಾಯಿ, ಹುಣಸೆ ಕಾಯಿ, ಜಾಯಿ ಕಾಯಿಗಳ  ಬಗ್ಗೆ ಮಾಡಿದ ಜಗಳ, ದೋಸ್ತಿ ಬಿಡುವುದು ಮುಂತಾದವುಗಳ ನೆನಪು ಆಗುತ್ತಿರುತ್ತದೆ. ಖೊಖೊ ಆಡುವಾಗ ಬಿದ್ದು ಹಲ್ಲು ಮುರಿದುಕೊಂಡಿದ್ದು, ಅಕ್ಕನ ಗುಂಪನ್ನು ಸೋಲಿಸಿ ಅವಳ ಕೋಪಕ್ಕೆ ಗುರಿಯಾಗಿದ್ದು, ಶಿಕ್ಷಕಿ ಪದ್ಮಾ  ಜೊತೆ ಅವರ ಪಕ್ಕದಲ್ಲೆ ನಡೆದು ಶಾಲೆಗೆ ಹೊಗಬೇಕೆಂದು ಹಠ ಮಾಡಿದ್ದು ಮೊದಲಾದವುಗಳು ಆಗಾಗ ನೆನಪಿಸಿಕೊಳ್ಳುವ ಸಂಗತಿಗಳು. ಪ್ರವಾಸಕ್ಕೆ ಯಾಣಕ್ಕೆ ಹೊಗಿದ್ದು, ಬರುವಾಗ ವಾಹನ ಕೈ ಕೊಟ್ಟು ಮೈಲಿಗಟ್ಟಲೆ ನಡೆದಿದ್ದು, ಶಾಲಾ ವಾರ್ಷಿಕೋತ್ಸವದಲ್ಲಿ ಗೆಳೆಯ ಗೆಳೆತಿಯರೊಡನೆ ನಾಟಕ ಆಡಿದ್ದು ಮೊದಲಾದವುಗಳು ಈಗ ಸವಿನೆನಪುಗಳು.

ಶಾಲಾ ದಿನಗಳಲ್ಲಿ ಇಷ್ಟ ಪಡುವ ಮತ್ತೊಂದು ಹಂತವೇ ನಾನು ಮಾಧ್ಯಮಿಕ ಶಾಲೆಯಲ್ಲಿ ಕಳೆದ  ದಿನಗಳು. ಶಾಲೆಗೆ ನಮ್ಮ ಹಳ್ಳಿಯಿಂದ ೮ ಕಿ. ಮೀ. ದೂರ ಬರಬೇಕಿತ್ತು.  ಶಾಲೆ ೧೦ ಘಂಟೆ ೩೦ ನಿಮಿಷಗಳಿಗೆ ಪ್ರಾರಂಭವಾಗುತ್ತಿದ್ದರೂ ೮ ಘಂಟೆ ೧೫ ನಿಮಿಷಕ್ಕೆಲ್ಲಾ ಶಾಲೆಯಲ್ಲಿ ಇರುತ್ತಿದ್ದೆವು. ಯಾಕೆಂದರೆ ಮತ್ತೆ ಬಸ್ಸಿನ ಸೌಕರ್ಯ ಇರಲಿಲ್ಲ. ಶಾಲೆ ಬಿಟ್ಟ ಮೇಲಂತು  ಹೆಚ್ಚಿನ ದಿನಗಳಲ್ಲಿ ಮನೆಗೆ ನಡೆದುಕೊಂಡೆ ಹೋಗಬೇಕಿತ್ತು. ಈಗ ಊರಿಗೆ ಹೊದಾಗ ಸ್ವಲ್ಪ ದೂರ  ನಡೆದರೂ ಕಷ್ಟ ಎನ್ನಿಸುತ್ತದೆ ಹಾಗು ಶಾಲಾದಿನಗಲ್ಲಿ ನಡೆದುಕೊಂಡು ಹೋಗುತ್ತಿದ್ದದ್ದು  ನೆನೆಪಿಗೆ ಬರುತ್ತದೆ.

ಶಾಲೆಯಲ್ಲಿ ಶಿಕ್ಷಕವೃಂದ ಹಾಗು ಗೆಳತಿಯರು ಪಾಠಗಲ್ಲಿ ಹೆಚ್ಚಿನ ಆಸಕ್ತಿ  ಬೆಳೆಸಿಕೊಳ್ಳಲು ಹಾಗು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮಾರ್ಗದರ್ಶನ, ಪ್ರೋತ್ಸಾಹ ನೀಡುತ್ತಿದ್ದರು. ಜಿಲ್ಲಾ ಮಟ್ಟದ ವಿಜ್ಞಾನ ಪ್ರದರ್ಶನವನ್ನು ಏರ್ಪಡಿಸಿ, ಭಾಗವಹಿಸಿ ಎಷ್ಟೊಂದು ಹೊಸ ವಿಷಯಗಳನ್ನು ಆಸಕ್ತಿಯಿಂದ ತಿಳಿದುಕೊಂಡಿದ್ದು ಮರೆಯಲಾಗದ  ನೆನಪು. ಆ ದಿನಗಳಲ್ಲಿ ಕಾದಂಬರಿ ಓದುವ ಹುಚ್ಚು ಎಷ್ಟು ಇತ್ತೆಂದರೆ ಹೆಚ್ಚಿನ ಸಮಾಜ ತರಗತಿಗಳಲ್ಲಿ ಸಮಾಜ ಪುಸ್ತಕದ ಒಳಗೆ ಕಾದಂಬರಿ ಇಟ್ಟುಕೊಂಡು ಓದುತ್ತಿದ್ದೆವು. ನನಗೆ
ಮಾಧ್ಯಮಿಕ ಶಾಲಾದಿನಗಳಲ್ಲಿ ಕಡಿಮೆ ಎನ್ನಿಸುವುದು ಶೈಕ್ಷಣಿಕ ಪ್ರವಾಸಕ್ಕೆ ಹೋಗದಿರುವುದು.  ಪ್ರವಾಸಕ್ಕೆ ಹೋಗಲು ಸಂಪೂರ್ಣ ತಯಾರಿ ನಡೆಸಿದ ಮೇಲೆ ರಾಮಜನ್ಮಭೂಮಿ ವಿವಾದದಿಂದ ಆದ ಗಲಾಟೆಯಿಂದಾಗಿ ಕೊನೆಯ ಗಳಿಗೆಯಲ್ಲಿ ರದ್ದಾಯಿತು. ಅಲ್ಲಿ ಕಳೆದ ಪ್ರತಿಯೊಂದು ಕ್ಷಣವೂ ಅವಿಸ್ಮರಣೀಯ.

ಒಟ್ಟಾರೆ ಶಾಲಾದಿನಗಳು ಮರೆಯಲಾಗದ ಸವಿನೆನೆಪುಗಳು. "ವಿಧ್ಯಾರ್ಥಿ ಜೀವನ ಸುವರ್ಣ ಜೀವನ" ಎಂಬುದು ನಿತ್ಯ ಸತ್ಯ. ಗೆಳೆಯ, ಗೆಳತಿಯರೆ ನಿಮ್ಮ ಶಾಲಾ ದಿನಗಳೂ ಹೀಗೆ ಇರಬಹುದಲ್ಲವೇ?!!.

# ಬ್ಯಾಸ್ಗಿ ಸೂಟಿ

– ಗುರುರಾವ ಕುಲಕರ್ಣಿ

" ತಿರುಗಿ ಬಿಸಲ ಬಿದ್ದದ, ಹುಡುಗ್ರೆಲ್ಲಾ ಏಳ್ರಿ " ಎಂದಾಗ ಹೊರಗೆ ಮಲಗಿದ್ದ ವಾನರ ಸೈನ್ಯಕ್ಕೆಲ್ಲ ಎಚ್ಚರ. ಹಾಸಿಗೆಯ ಸುತ್ತ ಚೆಲ್ಲಿರುವ ಪಾರಿಜಾತ ಹೂವು, ನಿಂಬೆಯ ಎಲೆ ನೋಡುತ್ತ ಮೈ ಮುರಿ ಚಟಪಟ ಸದ್ದು ಬರುವುದು. ರಾತ್ರಿಯೆಲ್ಲ ಒಳಗೆ ಬೆಚ್ಚಗೆ ಮಲಗಿದ್ದ ಬಿಳಿಬೆಕ್ಕು ಓಡಿಬಂದು ಯಾರದಾದರು ತೊಡೆಯೇರಿ ಕುಳಿತುಕೊಳ್ಳುವುದು. " ನಂಗ ಭಾರಿ ಅಂಜಿಕಿ ಆಗಿತ್ತು..." ಎಂದು ರಾಜು ತನಗೆ ಬಿದ್ದ ಕನಸು ಎಲ್ಲರೆದುರಿಗೆ ಬಿಚ್ಚಬೇಕೆನ್ನುವಗಲೆ ಒಳಮನೆಯಿಂದ ಮತ್ತೊಮ್ಮೆ ಅಲಾರಾಮ್ ಬೆಲ್ ಬಾರಿಸುವುದು " ಹೂಂ ಎಲ್ಲಾರು ಪಟಾಪಟಾ ಮುಖಾ ತೋಳಕ್ಕೊಂಡು ಬರ್ರಿ, ಯಾರು ಮೊದಲು ಬರ್ತೀರೋ ಅವ್ರಿಗೆ ಜಾಸ್ತಿ ಕೆನೆಯಿದ್ದ ಹಾಲು " ಎಂದಾಕ್ಷಣ ಒಂದೇ ಹೊಡ್ತಕ್ಕೆ ಎಲ್ಲರೂ ಗಡಿಬಿಡಿಯಿಂದೆಳುವರು.

ಹಾಲು ಕುಡಿದಾಕ್ಷಣವೇ, ತಂಬಿಗೆ ಕೈಯ್ಯಲ್ಲಿ ಜೈತ್ರಯತ್ರೆ ಸುರುವಾಗಬೇಕು. ಆರೇಳು ಮಂದಿ ಒಮ್ಮೆಲೆ ಹೊರಟರೆ " ದನ ಎಮ್ಮೆಗಳು ತೋಟಕ್ಕೆ ಹೊಂಟ್ಟಿದ್ದು, ಇಂಚಗೆರಿ ಬಸ್ಸ ರಾತ್ರಿ ವಸ್ತಿ ಮುಗಿಸಿ ಬರುವದು, ಮುಂಜಾನಿ ಸಂತಿ ಮುಗ್ಸಿ ಎಲ್ಲಾ ಹೆಣ್ಣುಮಕ್ಕಳು ತ್ವಾಟದ ಕಡಿಗೆ ಹೊರಟಿದ್ದು " ಹೀಗೆ ನಿತ್ಯಚಿತ್ರಗಳ ದರ್ಶನವಾಗುವುದು.

" ಏ ಪೌಣೇ ಒಂಬತ್ತು ಆಯ್ತು " ಎಂದಾರದರು ಕೂಗಿದರೆ " ಇನ್ನು ನಾವು ತಡ ಮಾಡಿದ್ರ ಈಸ್ಯಾಡಿ ಹೊಳ್ಳಿ ಬರಲಿಕ್ಕೆ ಲೇಟ ಆಗ್ತದ ಲಗೂನ ತ್ವಾಟಕ್ಕೆ ಹೋಗೊಣ ನಡ್ರಿ" ಎಂದು ಅರ್ಥ. ಎಲ್ಲರೂ ತಮ್ಮ ತಮ್ಮ ಚೆಡ್ಡಿಯನ್ನು ಟಾವೆಲ್ ಅಥವಾ ಪಂಜಾದಲ್ಲಿ ಸುರುಳಿಸುತ್ತಿ, ಒಂದು ಕೈಯ್ಯಲ್ಲಿ ಹಿಡ್ದು ಇನ್ನೋಂದರಲ್ಲಿ ಬ್ಯಾಟು ಚೆಂಡು ಹಿಡ್ದು ತ್ವಾಟದ ಕಡೆಗೆ ಪ್ರಯಣ ಶುರು.

ದಾರಿಗುಂಟ ತ್ವಾಟಕ್ಕೆ ಹೋದಮ್ಯಾಲ ಯಾರುಯಾರು ಏನೇನು ಮಾಡ್ಬೇಕು ಎನ್ನುವದೇ ಒಂದು ಸುದೀರ್ಘ ಚರ್ಚೆ. " ನಿನ್ನೆ ನಂದು ಲಾಸ್ಟ್ ಬ್ಯಾಟಿಂಗ ಇತ್ತು ನಾ ಮೊದ್ಲ ಚಾಲೂ ಮಾಡಂವಾ; ಇಲ್ಲಾಂದ್ರ ಆಟಕ್ಕೆ ಬರೊದಿಲ್ಲ ಅದಕ್ಕೆ ಇನ್ನೊಬ್ಬನ ತಕರಾರು. ಇಷ್ಟೆಲ್ಲಾ ಆಗುವದರಲ್ಲಿ ವವ್ವ ವವ್ವ ವವ್ವ ಎಂದು ಬೊಗಳಿ ನಾಯಿ ಎಲ್ಲರನ್ನು ಹಾರ್ದಿಕವಾಗಿ ತೋಟಕ್ಕೆ ಸ್ವಾಗತಿಸುವುದು.

ಟೈಮ ಅಂದಾಜು ಒಂಬತ್ತೂವರೆ ಹತ್ತಾಗಿದ್ರೆ, ಭಾಂವಿ ನೀರಾಗ ಬಿಸಲ ಬೀಳಬೇಕಂದ್ರ ಕಮ್ಮಿ ಅಂದ್ರೂ ಅರ್ಧತಾಸರೇ ಕ್ರಿಕೆಟ್ ಆಡಬೇಕು. ನೀರಾಗ ಬಿಸಲ

ಬೀಳಲಿಲ್ಲಂದ್ರ ನೀರು ಹ್ಯಾಂಗ ಕಾಯಬೇಕು ? ಅಲ್ಲಿತನ ಸ್ವಲ್ಪ ಟೈಮಪಾಸ್! ಒಂದು ರೌಂಡು ಕ್ರಿಕೆಟ್ ಆಡಿಡ್ಡೆ ತಡ ಎಲ್ಲಾರು ಒಡೋಡಕೋತ ಹೋಗಿ ನಾಮುಂದು ನಿಮುಂದು ಅಂತ ಭಾವ್ಯಾಗ ಹಾರುವರು. ಗಿರಿ ದೊಡ್ಡ ಫಡಿ ಕಲ್ಲಿನ ಮ್ಯಾಲಿಂದ ಜಿಗಿದರೆ , ಇನ್ನೊಬ್ಬ ಪಂಪ್ ಫೌಂಡೇಶನ್ ಹತ್ರದ್ದು ಹಾರುವನು, ಕೊನಗು ಕಿಟ್ಟು ಬಾವಿಕಟ್ಟಿ ಮ್ಯಾಲಿಂದ ಜಿಗಿಯುವನು. ಯಾಕಂದ್ರ ಅದಕ್ಕಿಂತಾ ಮ್ಯಾಲಿಂದ ಜಿಗಿಲಿಕ್ಕೆ ಸಾಧ್ಯನೆ ಇಲ್ಲ!!!!

" ಏ ಮುಟ್ಟಾಟ ಆಡೋಣೇನು " ಎಂದು ಕೇಳಿದ್ದೆ ತಡ ಹೊಂ ಎಲ್ಲಾರು ಚಕ್ಕಸಲ್ಲಿಕ್ಕೆ ರೆಡಿ. ಕೊನೆಗೆ ಯಾಂವ ಔಟ್ ಆಗಿ ಉಳಿತಾನೋ, ಅಂವ ಎಲ್ಲಾರಿಗೂ ನೀರಾಗ ಮುಟ್ಟಲ್ಲಿಕ್ಕೆ ಬರಬೇಕು. ಎಲ್ಲಾರು ಡಣಿಯೊತನ, ಅಥ್ವಾ ಯಾರಿಗೆರೇ ಕಲ್ಲು ಬಡ್ದು, ಕಿಂವ್ಯಾಗ ನೀರ್ಹೊಗಿ ವಲ್ಲೆ ಅನ್ನೊತನ ಆಟ ಸಾಗುವದು. ಬಾರಾ ಒಂದು ಆದಾಗ ಎಲ್ರೂ ಭ್ಹಾವಿಯಿಂದೆದ್ದು ಬಿಸಲಾಗ ತಲೆ ವಣಗಿಸಿಕೋಂಡು ತಯಾರಗಾವರು. ತಕ್ಷಣ ಎದುರಿದ್ದ ನೀಲಕಾಯಿ ಗಿಡ ಏರಿ, ನೀಲ ಕಾಯಿ ತಿಂದು, ಚಡ್ಯಾಗ ಟಾವೆಲ್ದಾಗ ನೀಲಕಾಯಿ ಹಾಕ್ಕೊಂಡು ಸವಾರಿ ಮನಿಕಡೆ ಹೊಂಡಬೇಕು.

ಆಗಲೇ ತಳ ಹಾಕುತ್ತಿರುವ ಹೊಟ್ಟೆಗೆ ಮನಿಗೆ ಬರುವುದೇ ತಡ ಭರಪೂರ ಮಾವಿನಕಯಿ ಸಿಕರ್ಣೆ, ಚಪಾತಿ ಮಜ್ಞ. ಮುತ್ಯಾ ಮಾವಿನಗಿಡ ಹಚ್ಚಿದ್ದು ಮೊಮ್ಮಕ್ಕಳು ಹಣ್ಣು ತಿಂದಾಗಲೇ ಸಾರ್ಥಕವಲ್ಲವೇ?

ಊಟಾದ ಮೇಲೆ ಪಗಡಿ ಮನೆ ಕೊರೆದ ಮಣಿ ಪಡಸಾಲೆಗೆ ಬರುವದು. ಮಣಿ ಇಲ್ಲಾಂದ್ರ ನೆಲದ ಮ್ಯಾಲೇ ೫ ಮನಿ ಅಥ್ವಾ ೭ ಮನಿ ಕೊರೆದು ಆಟ ಚಾಲು. ಪಗಡಿ ಅಂದಾಕ್ಷಣ ಶಕುನಿಮಾಮಾಗಳಿಗೇನು ಕೊರತೆಯೆ? " ಏ ರಾಜು ಎಡಗೈಲಿ ನಿನ್ನ ಕಾಯಿ ಮುಂದಕ್ಕೆ ಸರಸಬ್ಯಾಡ " "ನನಗೆ ಪಂಚವೀಸ ಬಿದ್ರ ಡೈರೆಕ್ಟ ಕಡ್ತ ಸಿಗ್ತದ, ಇಲ್ಲಾಂದ್ರ ಛಕ್ಕಾ, ಚಾರಿ ಬಿದ್ರೂ ನಡಿತದ " " ನಿಂಗ ಚಾರಿ ಮ್ಯಾಲೆ ದೊನಿ ಬಿದ್ರ ಜೂಗಾ ಕಟ್ಟಲಾ" " ಏ ತನ್ಯ ಆಡಬ್ಯಾಡ, ಸರಿಯಾಗಿ ಗೊಳಗೊಳಿಸಿ ಕಾಯಿ ಹಾಕು ಹಿಡ್ದು ಬಿಡಬ್ಯಾಡ" ಎಂದೆಲ್ಲಾ ನಿತ್ಯದ ಸಣ್ಣಪುಟ್ಟ ಜಗಳ/ ಸಲಹೆಗಳಾದಲೇ ಆಟವಾಡಿದ್ದು ಸಾರ್ಥಕ!.

ಇದರ ಮಧ್ಯೆ ಆಟದಲ್ಲಿ ದಕ್ಕದೆ ಹೋದ ನಿರುಪದ್ರವ ಜೀವಿಗಳ ಅಥವಾ ಲಗೂನೇ ಗೆದ್ದವರು ನಂದವನದ ಕತೇನೋ ಅಥವಾ ಸಂ.ಕ ಪೇಪರೋ/ಕಸ್ತೂರಿಯೊ ಓದುವರು.

**ಕೊಲಂಬೋ ೧೦: ಗೆರಿಲ್ಲಾ ದಾಳಿ, ಒಂಬತ್ತೊ ಸಾವು** ಎಂದು ವಿನಾಯಕ ಜೋರಾಗಿ ಓದುವನು. ಗೋರಿಲ್ಲಾ ಗೊತ್ತು ಆದ್ರ ಗೆರಿಲ್ಲಾ ಅಂದ್ರೇನು ? ಗೆರಿಲ್ಲಾ ಗೋರಿಲ್ಲಾ ಆಯಿ ಮುತ್ಯಾನೋ, ಎಂಥಾದೊ ಪ್ರಾಣಿ ಇರಬೇಕು ಎಂದು ನಾಕತ್ತೆನೆಯ ವಿನಾಯಕ ತನ್ನಷ್ಟಕ್ಕೆ ಸುಮ್ಮನಾಗುವನು.

ನಾಲ್ಕೂವರಿ ಐದು ಆದದ್ದೇ ತಡ ಸ್ವಲ್ಪ ಬಿಸಲ ಕಮ್ಮಿ ಆಗ್ಯೇದ ಅಂದ್ರ ಗೋಟಿ, ಗಜಗ,ಚಿಣಿದಾಣು ಹಿಡಿದು ಗಾಣದ ಬಯಲು/ಗುಡಿ ಮುಂದ ಎಲ್ಲಾ ಕಡಿ ಮಂಡಲಾ ಕೊರೆದು ಆಟ ಚಾಲು. ಉಳದವರು ತಯಾರ ಇದ್ರ ಗಿಡಬಡಗಿ, ಮಂಗ್ಯಾನ ಆಟ, ಲಗೋರಿ, ಧಪ್ಪಾದುಪ್ಪಿ, ಸುರಮನಿ ಎಲ್ಲಾ ಆಡ್ಬಹುದು.

ಇನ್ನೂ ಸ್ವಲ್ಪ ಕತ್ಲಾಗಿ ಲೈಟು ಹೋದ್ರ ಈಸ್ಟಾಪ್‌ಗೆ ರಂಗೇರುವುದು. ದಿನವು

ಆಡಗಿಕೊಳ್ಳಲಿಕ್ಕೆ ಹೊಸಹೊಸ ಜಾಗಗಳ ಸಂಶೋದನೆ. ಬಾಗಲಸಂದಿ, ಶೇಂಗಾದ ಚೀಲದ ನಡುವೆ, ಕಟ್ಟಿಮರಿಗೆ, ಮಾತಡಕೋತ ನಿಂತದೊಡ್ಡವರ ಹಿಂದೆಲ್ಲಾ ಅಡಗಿ, ಮುಟ್ಟಲಿಕ್ಕೆ ಬಂದಾಗ ಹುಯ್ಯ ಅಂತ ಒಮ್ಮೆಲಿಗೇ ಮ್ಯಾಲೇ ಬಿದ್ದರ ಮುಗೀತು!!.

ಇಂಥ ಆಟಗಲೇಷ್ಟೊ? ಅವುಗಳಲ್ಲಿ ದಿನವು ಅನುಕೂಲಕ್ಕೆ ತಕ್ಕಂತೆ–ನಿಯಮಗಳಲ್ಲಿ ತಿದ್ದುಪಡಿ. ಯಾರಿಗಾದ್ರು ಸಣ್ಣ ಹುಡುಗ ಅಂತ್ಹೇಳಿ ರ್ಝುಬ್ರಿಸಿ ಕಳ್ಳಿದ್ರ, ಅಂವ ಅಳಕೋತ ಮನಿಗೆ ಹೋದ್ರ ಎಲ್ಲರಿಗೂ ಬಯ್ಗಳ!. ಅದಕ್ಕ ಅಂಥ ಸಣ್ಣವರಿಗೆ " ಹೋಳು ಉಪ್ಪಿನಕಾಯಿ" ಮಾಡಿ ಎಲ್ಲಾರು ಬಚಾವ್. ಅವ್ರು ಏನು ಮಾಡಿದ್ರು ಮಾಫಿ! ಖರೇ ಅಂದ್ರ ಆಟಕ್ಕುಂಟು ಲೆಕ್ಕಕ್ಕಲ್ಲ ಪರಿಸ್ಥಿತಿ!!! ಅದಕ್ಕೆ ಹೋಳು ಉಪ್ಪಿನಕಾಯಿ ಆಗಲಿಕ್ಕೆ ಯಾರು ತಯಾರಾಗುವುದಿಲ್ಲ.

ರಾತ್ರಿ ಎಂಟು,ಎಂಟೂವರಿ ಆದಾಗ ವಾಪಸ್ಸು ಮನೆಯದಾರಿ. ಎಲ್ಲರೂ ರೌಂಡು ಕೂತು ಊಟ ಮತ್ತೆ ದೊಡ್ಡಾಗಿ ಹಾಸ್ಗಿಹಾಕಿ ಬೀರಬಲ್/ತೆನಾಲಿಎರಾಮನ ಕತಿ ಇಲ್ಲಾಂದ್ರ ಹಾಡಿನ ಬಂಡಿ ಚಾಲು. ತೂಕಡಿಸಿ, ತೂಕಡಿಸಿ ಒಂದೆರಡು ವಿಕೆಟು ಬಿದ್ದಾಗಲೇ ಉಳಿದವರಿಗೆ ನಿದ್ದಿ!!!.

ಸಾಕಲ್ಲವೇ ಸದ್ಯ? ಉಳಿದದ್ದು ಮುಂದಿನ ದೀಪಾವಳಿಗೆ ಬರೆದರಾಯಿತು.

## Compu-ಕಾವ್ಯಗಳು

- ಗುರುರಾಜ ಕೆ. ಕುಲಕರ್ಣಿ

ನೀನೇ ನನ್ನ ಬಾಳಿನ
ಹಾರ್ಡವೇರ್–ಸಾಫ್ಟ್‌ವೇರ್.
ನೀ ನನ್ನ ಕೈ ಬಿಟ್ಟರೆ,
ನನ್ನ ಬಾಳು No-where !!

ನೀನೇ ನನ್ನ ಬಾಳಿನ
Bit-Byte …
ನೀ ನನ್ನ ಕೈ ಬಿಟ್ಟರೆ,
ನನ್ನ ಬಾಳೂ Shift-Delete!!

ನೀ ನನ್ನ ನೋಡ
ಬ್ಯಾಡ ಹಿಂಗ...
ನೋಡಿದ್ರ ನನ್ನ
system ಆಗತೈತಿ Hang !!

ನಿನಗಾಗಿ ಕಾಯುತ್ತಿರುವೆ
ಗೆಳತಿ ರಾತ್ರಿ-ಹಗಲು,
ಬಂದು ಬಿಡು ನನ್ನ
connection timeout ಆಗುವ ಮೊದಲು !!

## ಇಂಟರಸಿಟಿ ಕೊರೆತ.... ಇದು ಕಥೆಯಲ್ಲ

-ಭೀಮಸೇನ ಜೋಶಿ

ಪ್ರಯಾಣ ಅನುಭವದ ಬಾಗಿಲುಗಳನ್ನು ತೆರೆಯುತ್ತದೆ. ನಮ್ಮ ಹಿರಿಯರು ಬಹುಶ: ಯಾತ್ರೆ ಬದುಕಿನ ಅವಿಭಾಜ್ಯ ಅಂಗವಾಗಬೆಕು ಎಂದಿದ್ದು ಇದಕ್ಕಾಗಿ ಇರಬೆಕು.ಇದರಲ್ಲು ಬಹಳ ವಿಧಗಳಿವೆ ಉದಾ: ನಿವು ಬಸ್ಸಿನಲ್ಲಿ ವಿವಿಧ ಸಾಮಾಜಿಕ, ಭೌಧಿಕ ಸ್ತರದ ಮಂದಿ
ಯೊಂದಿಗೆ ಭೇಟಿ ಆಗುತ್ತದೆ. ಬೆಂಗಳೂರಿನಿಂದ ಹುಬ್ಬಳ್ಳಿಗೆ ಟ್ರೈನ ಪ್ರಯಾಣದಲ್ಲಿ
ಬಗೆ ಬಗೆಯ ಜನರನ್ನು ಕಾಣಬಹುದು . ಒಮ್ಮೆ ಹೀಗೆ ಬೆಂಗಳೂರಿನಿಂದ ೧೪.೩೦ ಕ್ಕೆ ಟ್ರೈನನಲ್ಲಿ
ಹುಬ್ಬಳ್ಳಿಗೆ ಹೊಗುತ್ತಿದ್ದೆ, ಹುಬ್ಬಳ್ಳಿಗೆ ಸುಮಾರು ೧೦ ಗಂಟೆಗೆ ಮುಟ್ಟುತ್ತದೆ

ಅಷ್ಟು ಹೊತ್ತು ಒಳ್ಳೆ ನಿದ್ದೆ ಮಾಡೋಣ ಎಂದು ಕಿಟಕಿಯ ಬದಿಯ ಸಿಟೊಂದರಲ್ಲಿ ಕಾಲು ಚಾಚಿ ಕಣ್ಣು ಮುಚ್ಚಬೇಕು ಎನ್ನುವಷ್ಟರಲ್ಲಿ ಯುವತಿಯೊಬ್ಬಳು ಒಳ ಬಂದು ನನ್ನ ಸೀಟಿನ ಪಕ್ಕದಲ್ಲಿ ಕುಳಿತಳು. ಓಡುತ್ತಾ ಬಂದಳೆಂದು ಕಾಣುತ್ತದೆ ಬೆವರುತ್ತಿದ್ದಳು, ಚೀಲದಿಂದ ನೀರಿನ ಬಾಟಲಿ ತಗೆದು ಸ್ವಲ್ಪ ನೀರು ಕುಡಿದಳು.

ಎಲ್ಲಾ ಕಡೆಗೂ ನೋಡುತ್ತ, ದೊಡ್ಡ ನಗೆ ಬೀರುತ್ತ ಸಂಭಾಷಣೆಗೆ ತಯಾರಾದಂತೆ ಕಂಡಳು. ಅವಳ ಮೊದಲ ಪ್ರಶ್ನೆ .. ಎಲ್ಲಿಗೆ ಹೊರಟಿದ್ದಿರಿ? ನಾನು ಹುಬ್ಬಳ್ಳಿಗೆ ಎಂದೆ. ಅವಳು .. ಹುಬ್ಬಳ್ಳಿಯಲ್ಲಿ ಎಲ್ಲಿ? ಎಂದು ಕೇಳಿದಳು. ವಿವರಗಳನ್ನು ನೀಡಲು ನನಗೆ ಮುಜುಗರವೆನಿಸಿತು, ಗುರುತು ಪರಿಚಯ ಇಲ್ಲದವರಿಗೆ ಏಕೆ ಪರಿಚಯ..ಬೇಡಪ್ಪ ಎನಿಸಿತು. ನಾನು ಮೊದಲೇ ಅಪರಿಚಿತರೊಂದಿಗೆ ಮಾತನಾಡುವದು ಕಡಿಮೆ, ಅದರಲ್ಲು ಹುಡುಗಿಯರೆಂದರೆ ಸ್ವಲ್ಪ ದೊರವಿರುವದೇ ವಾಸಿ. ಆದರೂ ಯಾರಾದರು ಮಾತನಡಿಸಿದರೆ ಮಾತನಾಡಬೆಕಲ್ಲ! ಆದ್ದರಿಂದ ಉತ್ತರಿಸಿದೆ ..ವಿದ್ಯಾನಗರ.. .ಉತ್ತರಿಸಿದ ಕೂಡಲೇ ಪ್ರಶ್ನೆಗಳ ಸುರಿಮಳೆಯೆ ಪ್ರಾರಂಭವಾಯಿತು.

ವಿದ್ಯಾನಗರದಲ್ಲಿ ಮನೆ ಎಲ್ಲಿದೆ? ಕೆ.ಎಂ.ಸಿ. ಪಕ್ಕದಲ್ಲಿ ಇರುತ್ತೀರಾ...

ಅಯ್ಯಪ್ಪ !!!! ಇವಳ ಪ್ರಶ್ನೆಗಳಿಗೆ ಉತ್ತರಿಸಬೇಕಾಯಿತಲ್ಲ. ಇವಳ ಮಾತನ್ನು ನಿಲ್ಲಿಸಲು ಒಂದೆ ದಾರಿ ಇತ್ತು ... ನನ್ನ ಬಳೀ ಇದ್ದ ಪೇಪರ್ ಓದಲು ಪ್ರಾರಂಭಿಸಿದೆ. ಅಷ್ಟರಲ್ಲಿಯೇ ಮತ್ತೊಂದು ಪ್ರಶ್ನೆ .. ಅಂದಹಾಗೆ ನೀವು ಏನು ಮಾಡುತ್ತೀರಿ? ನಾನು

ಬಿ.ಇ. ಮುಗಿಸಿದ್ದೇನೆ, ಉನ್ನತ ವಿದ್ಯಾಭ್ಯಾಸಕ್ಕಾಗಿ ಟಿ.ಸಿ. ತರಲು ಹೊರಟಿದ್ದೇನೆ.

ಓ!! ನೀವು ಇಂಜನೀಯರಾ?? ಎಲ್ಲಿ ಮುಗಿಸಿದ್ದು?? ಬಿ.ವಿ.ಬಿ. ಯಲ್ಲಾ??

ಸರಿ, ಎಷ್ಟೇ ಆದರೂ ಉತ್ತರಿಸಬೇಕಲ್ಲಾ ಎಂದು ಹೇಳತೊಡಗಿದೆ. ನಾನು ಕಲಿತಿದ್ದು ಎಸ್.ಡಿ.ಎಮ್. ನಲ್ಲಿ..ಇರುವದು ಬೆಂಗಳೂರಿನಲ್ಲಿ...

ಇಷ್ಟೆಲ್ಲ ಕೇಳುವಷ್ಟರಲ್ಲಿ ತುಮಕೊರು ಬಂದಿತ್ತು. ಇವಳು ಮಾತನಾಡುವದನ್ನು ಕೇಳಿದರೆ ಯಾವುದಾದರು marketing ಕೆಲಸ ಮಾಡುತ್ತಾಳೊ ಅಥವಾ

ಯಾವುದಾದರು press ನವಳು ಇರಬೇಕು ಎಂದೆನಿಸಿತು. ಅವಳು ಕೊರೆಯುವದನ್ನು ನೋಡಿದರೆ ಕೊರೆಯುವದರಲ್ಲಿ expert ಅಂತ ಕಾಣುತ್ತಿತ್ತು!! ಸರಿ, ಏನೇ ಆಗಲಿ ನಾನು ಈ ವಿಷಯಕ್ಕೆ full point ಹೇಳೋಣವೆಂದ್ರೆ ಆ ಗಿರಾಕಿ ಬಿಡದೇ ಕೊರೆಯತೊಡಗಿದಳು.

ಉದಾ. ಬಿ.ಇ. ಆದಮೇಲೆ ಭವಿಷ್ಯ, ನಮ್ಮ ದೇಶದ software export, corruption ಮುಂತಾದವುಗಳು...

ಇನ್ನು ಈ ತರಹದ ವಿಷಯಗಳು ಬಂದರೆ ಮುಗಿಯಿತು, ಒಂದಕ್ಕೊಂದು ಬೆಳೆಯುತ್ತಲೆ ಹೊಗುತ್ತದೆ ಎಂದು ಅಂದು ಕೊಂಡೆ.

ಕೊನೆಗೆ "offence is the best defence" ಅಂತ ನಾನು counter attack ಪ್ರಾರಂಭ ಮಾಡಬೇಕಂದ್ರೆ ಯಾವ ಅವಕಾಶ ಕೊಡುವ ಲಕ್ಷಣವೇ ಇರಲಿಲ್ಲ. ಏನಪ್ಪ ಇದು Match one sided ಆಗುತ್ತಾದೆಯಲ್ಲ... ಸರಿ, ಇವಳದಾದರು

ಏಷ್ಟು ಸಾಮರ್ಥ್ಯ ಇದೆ ನೊಡೋಣ ಎಂದು ಸುಮ್ಮನಾದೆ.

ಅಷ್ಟರಲ್ಲಿ ದಾವಣಗೇರೆ ಬಂತು ಆಗ ಒಮ್ಮೆಲೇ ಅವಳು ಎಲ್ಲಾ ವಿಷಯ ಬಿಟ್ಟು ತನ್ನ ವಿಷಯಕ್ಕೆ ಬಂದಳು.

.. ಕಳೆದ ವಾರ ನಾನು ಒಂದು interview ಗೇ ಹೊಗಿದ್ದೆ ,ಆದರೆ

select ಆಗಲಿಲ್ಲ ಎಂದು ಹೇಳಿದರು ಕಾರಣ communication skill improve ಮಾಡಿಕೋ ಎಂದು ಹೇಳಿದರು...

so ಆವಾಗ ನನಗೆ ತಿಳಿಯಿತು communication skill improve ಮಾಡಿಕೊಳ್ಳುವುದಕ್ಕೆ ನನ್ನನ್ನು ಉಪಯೋಗಿಸಿದಳು ಅಂತ ಅನಿಸಿತು.

ಓ! ನನ್ನ ಸ್ಟೇಷನ್ ಬಂದಿತು " Thanks for your cooperation" ಮತ್ತೆ ಸಿಗೋಣ ಅಂತ ಹೇಳುತ್ತ ಹೊರಟೇ ಹೊದಳು.

ಕೊನೆಗೆ ಹುಬ್ಬಳ್ಳಿ ಬರುವ ವರೆಗೆ ಏನಪ್ಪ ಮಾಡುವದು ಅಂತ ಮತ್ತೆ ಪೇಪರ್

ಓದೋಣ ಅಂತ ಪೇಪರ್ ತಗೆದೆ ಆದರೆ ಏನು ಮಾಡುವುದು ಪೇಪರ್ ಓದುವ ಮನಸ್ಸೇ ಹೊರಟು ಹೊಗಿತ್ತು!!!!!!!!!!!.

# ಜ್ಯೋತಿಷ್ಯದಲ್ಲಿ ನಂಬಿಕೆ ಅತೀಯಾಗಿದೆಯೇ?

–ಸುಷಮಾ ದೇಸಾಯಿ

ನಂಬಿಕೆ ಮನುಷ್ಯನ ಜೀವನದಲ್ಲಿ ಅತೀ ಮುಖ್ಯವಾದ ಪದ. ಆದರೆ ಅದೇ ನಂಬಿಕೆ ಮೂಢನಂಬಿಕೆಗೆ ಸನಿಹವಾದರೆ ತನ್ನ ಅರ್ಥವನ್ನೇ ಕಳೆದುಕೊಳ್ಳುತ್ತದೆ. ತಂದೆ ತಾಯಿ–ಮಕ್ಕಳು, ಅಕ್ಕ–ತಂಗಿ, ಗಂಡ–ಹೆಂಡತಿ, ಯಜಮಾನ–ಕೆಲಸಗಾರ, ಗೆಳೆಯರ,ಗೆಳತಿಯರ ನಡುವಿನ ನಂಬಿಕೆ ಮನುಷ್ಯ ಸಾಮಾಜಿಕ ಜೀವಿ ಎಂದು ನಿರೂಪಿಸುತ್ತವೆ. ಮನುಷ್ಯನಿಗೆ ದೇವರಲ್ಲಿಯ ನಂಬಿಕೆ ಅವನಲ್ಲಿ ಆವಶ್ಯವಿದ್ದಾಗ ಭರವಸೆಯನ್ನು ನೀಡುತ್ತದೆ. ಅದಕ್ಕೇ ಪರಿಸ್ಥಿತಿ ಕೈ ಮೀರಿದಾಗ ಯಾರೇ ಆಗಲಿ ಸಾಮಾನ್ಯವಾಗಿ ಹೇಳುವುದುಂಟು "... ಇನ್ನು ಆ ದೇವರಿಗೇ ಬಿಟ್ಟದ್ದು." ಬಹು ಕಷ್ಟದ ಕೆಲಸ ಸಾಧ್ಯವಾದಾಗ ಅಥವಾ ಸ್ವಲ್ಪದರಲ್ಲಿಯೇ ಅಪಘಾತದಿಂದ ಪಾರಾದರೆ ಹೇಳುತ್ತಾರೆ –" ದೇವರು ದೊಡ್ಡವ!" ಎಂದು.

ಇನ್ನು ಮೂಢನಂಬಿಕೆಗಳ ಬಗ್ಗೆ ಮಾತನಾಡಿದರೆ ಅದೊಂದು ಮುಗಿಯದ ಅಧ್ಯಾಯವೇ ಸರಿ.ಇಂದಿಗೂ ನಮ್ಮ ಹಳ್ಳಿಗಳಲ್ಲಿ ಕಾನೂನು ಬಾಹೀರವಾದ ಪ್ರಾಣಿಬಲಿಯನ್ನು ದೇವಿ ಜಾತ್ರೆಗಳಲ್ಲಿ ನಡೆಸುತ್ತಲೆ ಇದ್ದಾರೆ. ಮಾಟ–ಮಂತ್ರಗಳನ್ನು ನಂಬುತ್ತಲೇ ಇದ್ದಾರೆ. ನಿಧಿ ತೆಗೆಯಲು , ಹಸುಳೆಗಳ ಬಲಿ ಕೊಡಲು ತಯಾರಿರುವ ಜನರೂ ಇದ್ದಾರೆ.

ಈಗ ನಾನು ಪ್ರಸ್ತಾಪಿಸುತ್ತಿರುವ ವಿಷಯ, ಮನುಷ್ಯನಿಗೆ ಜ್ಯೋತಿಷ್ಯದಲ್ಲಿ ಇರುವ ನಂಬಿಕೆ. ಹಾಂ ! ನಾವು ಜ್ಯೋತಿಷ್ಯವನ್ನು ಸ್ವಲ್ಪ ಹೆಚ್ಚೇ ನಂಬುತ್ತೇವೆ.ಅದಕ್ಕೇ, ರಸ್ತೆಗಳ ಬದಿಯಲ್ಲಿ ಒಂದು ಗಿಳಿ, ಇಸ್ಪೀಟು ಎಲೆಗಳನ್ನು ಇಟ್ಟುಕೊಂಡವರಿಂದ ಹಿಡಿದು ಟಿ.ವಿ. ಇಂಟರನೆಟ್ ಮೂಲಕ ಭವಿಷ್ಯ ಹೇಳುವವರು ಹೆಚ್ಚುತ್ತಿದ್ದಾರೆ. ಮೇಲಿನ ವಾಕ್ಯಗಳಿಂದ ವ್ಯಕ್ತವಾಗುವಂತೆ ನಾನೇನು ಜ್ಯೋತಿಷ್ಯಶಾಸ್ತ್ರಕ್ಕೆ ವಿರುದ್ಧವಾದ ಅಭಿಪ್ರಾಯ ಇಟ್ಟುಕೊಂಡಿಲ್ಲ. ಕೇಲವರು ತಮ್ಮ ತೊಂದರೆಗಳಿಗೆ ಸಲಹೆ ಹುಡುಕಿಕೊಂಡು ಜ್ಯೋತಿಷ್ಯದ ಮೊರೆ ಹೋದರೆ, ಇನ್ನೂ ಕೆಲವರು ಕುತೂಹಲಕ್ಕಾಗಿ ಅದನ್ನರಿಸಿಕೊಂಡು ಹೋಗುತ್ತಾರೆ. ಕೇವಲ ಕುತೂಹಲಕ್ಕಾಗಿ ಕೇಳಿ ಅಲ್ಲಿಯೇ ಬಿಟ್ಟರೆ ನಷ್ಟವೇನಿಲ್ಲ, ಆದರೆ ಏನಾದರು ಪ್ರತಿಕೂಲವಾದದ್ದು ಸಂಭವಿಸುತ್ತದೆ ಎಂದು ಕೇಳಿ ಅದನ್ನೇ ಮನಸಿನಲ್ಲಿಟ್ಟುಕೊಂಡು ಕುಗ್ಗಬಾರದು. ನಾವು ಜ್ಯೋತಿಷ್ಯ

ನಂಬುವುದು ಸ್ವಲ್ಪ ಅತೀಯೇ ಆಯಿತು. ಪರೀಕ್ಷೆಯ ವೇಳೆಯಲ್ಲಿ ಹೋಗಿ, ಪರೀಕ್ಷೆ ಹೇಗೆ ಮಾಡುವೆ ಎಂಬ ಬಗ್ಗೆ ಜ್ಯೋತಿಷ್ಯ ಕೇಳುವವರಿದ್ದಾರೆ. ಏನೇ ಮಾಡಿದರು ಈ ಸಲ ನಿನಗೆ ಪರೀಕ್ಷೆ ಚೆನ್ನಾಗಿ ಮಾಡಲು ಆಗುವುದಿಲ್ಲ ಎಂದು ಜ್ಯೋತಿಷಿ ಹೇಳಿಬಿಟ್ಟರೆ ಮುಗಿದೇ ಹೋಯ್ತು.ಎಷ್ಟೇ ಚೆನ್ನಾಗಿ ತಯಾರಿ ಮಾಡಿದ್ದರೂ ಆತ್ಮ ವಿಶ್ವಾಸ ಕಳೆದುಕೊಂಡು, ಪರೀಕ್ಷೆಗಳನ್ನು ಸರಿ ಮಾಡದೇ ಇರುವಂಥಾ ಜನರೂ ಇದ್ದಾರೆ. ಉದ್ಯೋಗ–ವ್ಯಾಪಾರ, ರೋಗ–ರುಜಿನ ಮುಂತಾದ ಮಹತ್ವದ ವಿಷಯಗಳಲ್ಲಿ ಜ್ಯೋತಿಷ್ಯದ ಮೊರೆ ಹೋಗುವುದು ಸರಿಯಲ್ಲ. ಮೊದಲೇ ಅಸ್ಥಿರವಿರುವ ಮನಸ್ಸು, ಕೆಡುಕಾಗುವ ವಿಷಯ ಹೇಳಿದರೆ ಸಂಪೂರ್ಣ ವಿಶ್ವಾಸ ಕಳೆದುಕೊಳ್ಳುತ್ತದೆ. ಒಂದೇ ಪ್ರಶ್ನೆಗೆ ಹಲವಾರು ಜ್ಯೋತಿಷಿಗಳು ಹಲವಾರು ಹೇಳಿಕೆಗಳನ್ನು ನೀಡುತ್ತಾರೆ. ಎಲ್ಲರ ಉತ್ತರಗಳೂ ಸರಿಯಿರಲು ಸಾಧ್ಯವಿಲ್ಲ. ನನ್ನ ಮುಂದಿರುವ ಪ್ರಶ್ನೆ ಎಂದರೆ, ಯಾರು ಸರಿ ? ಉದಾಹರಣೆಗೆ : ಯಾವುದೇ ಮನೆಯ ತೊಂದರೆಗೆ, ಕೆಲವರು ಹೇಳುತ್ತಾರೆ ಮನೆಯ ಬಾಗಿಲನ್ನುಪೂರ್ವಕ್ಕೆ ಮಾಡಿಸಿರಿ, ಮತ್ತೊಬ್ಬರ ಸಲಹೆ ಆಗ್ನೇಯಕ್ಕೆ ಮುಖ್ಯ ಬಾಗಿಲಿರಲಿ, ಮುಗೊದೊಬ್ಬರು ಜಾಗವೇ ಸರಿ ಇಲ್ಲ, ಅದನ್ನು ಮಾರಿ ಬಿಡಿ ಎನ್ನುತ್ತಾರೆ. ಯಾವುದು ನಿಜ ? ಮನೆಯನ್ನು ವಾಸ್ತು ಪ್ರಕಾರ ಕಟ್ಟಿಸಬೇಕೆಂದು ಹಿರಿಯರು ಹೇಳುತ್ತಾರೆ. ನಿಜ, ಆ “ವಾಸ್ತು “ ನಿಯಮಗಳು ವೈಜ್ಞಾನಿಕ ಸತ್ಯಗಳನ್ನು ಒಳಗೊಂಡಿವೆ. ಮನೆ ಕಟ್ಟುವಾಗ ಗಾಳಿ–ಬೆಳಕು ಮುಂತಾದ ಮೂಲ ಆವಶ್ಯಕತೆಗಳಿಗೆ ಮಹತ್ವ ನೀಡಲು ಸೂಚಿಸುತ್ತವೆ.

ಹಾಗೆಂದು ಜ್ಯೋತಿಷ್ಯಶಾಸ್ತ್ರ ನಂಬಲೇ ಬಾರದು ಎಂದು ನಾನು ವಾದಿಸುವುದಿಲ್ಲ. ಆದರೆ ನಾವು ನಂಬುತ್ತಿರುವ ಜ್ಯೋತಿಷಿಗೆ ಆ ಸಾಮರ್ಥ್ಯ ಇದೆಯೇ ನೋಡಬೇಕು. ಎಷ್ಟೋ ಜ್ಯೋತಿಷಿಗಳಿಗೆ ತಮ್ಮ ಹೇಳಿಕೆ/ಸಾಮರ್ಥ್ಯದ ಮೇಲೆ ತಮಗೇ ನಂಬಿಕೆ ಇರುವುದಿಲ್ಲ. ಇನ್ನು ಉಳಿದವರ ಭವಿಷ್ಯ ಹೇಳುವುದು ದೂರದ ಮಾತು.

ನನ್ನ ಪ್ರಕಾರ, ಸಾಮರ್ಥ್ಯ ಇರುವ ವ್ಯಕ್ತಿ ಎಂದರೆ, ಜ್ಯೋತಿಷ್ಯಶಾಸ್ತ್ರವನ್ನು ಸರಿಯಾಗಿ ಅಧ್ಯಯನ ಮಾಡಿರಬೇಕು. ಹೇಳಿದ್ದು ೯೦% ಆದರು ನಿಜವಾಗಬೇಕು. ಕಾಲಕಾಲಕ್ಕೆ ತಕ್ಕಂತೆ ಹೇಳಿಕೆಗಳನ್ನು ಬದಲಿಸಬಾರದು. ದುರಾಸೆಯವರಾಗಿರಬಾರದು. ಅವರ ಹೇಳಿಕೆಗಳು ಸಾಮಾನ್ಯ ಮನುಷ್ಯರಿಗೆ ಅರ್ಥವಾಗದಿದ್ದರೂ, ಇನ್ನೊಬ್ಬ ಜ್ಯೋತಿಷಿಗೆ ಅರ್ಥವಾಗಬೇಕು. ನಾನು ಇಂತಹ ಎಷ್ಟೋ ಜ್ಯೋತಿಷಿಗಳ ಬಗ್ಗೆ ಕೇಳಿದ್ದೇನೆ. ಕೆಲವರು ತಮ್ಮ ಮೃತ್ಯು ವೇಳೆಯನ್ನು ಸರಿಯಾಗಿ ಬರೆದಿಟ್ಟವರೂ ಇದ್ದಾರೆ. ಇಂತಹ ಜ್ಯೋತಿಷಿಗಳಿದ್ದರೆ ಮಾತ್ರ , ಜ್ಯೋತಿಷ್ಯಶಾಸ್ತ್ರ ಮೇಲಿರುವ ನಂಬಿಕೆಗೆ ಒಂದು ಅರ್ಥವಿದೆ, ಜ್ಯೋತಿಷ್ಯಕ್ಕೂ ಭವಿಷ್ಯವಿದೆ !!

# ವಿಜ್ಞಾನಿಗಳಿಂದ ಅಜ್ಞಾನಿಗಳಿಗೊಂದು ಪತ್ರ

ಪ್ರಿಯ ಮಿತ್ರರೇ,

ನನಗೆ ಈ ವಿಷಯದ ಬಗ್ಗೆ ವಿಶೇಷ ಆಸಕ್ತಿ ಇಲದಿದ್ದರೂ ಅನೇಕರ ಜೊತೆಗೆ ಮಾತನಾಡುವಾಗ ತಮ್ಮ ಮದುವೆ ಎಂಬ ದುರಂತದ ಬಗ್ಗೆ ಹೇಳುತ್ತಿರುತ್ತಾರೆ. ಮುಖ್ಯವಾಗಿ ಇದರಲ್ಲಿ ಗಂಡು ತೊಂದರೆ ಅನುಭವಿಸುವುದು ಕಂಡು ಬರುತ್ತದೆ. ಅನೇಕರ ಪ್ರಕಾರ ಮದುವೆಯ ದುಷ್ಪರಿಣಾಮವೇನೆಂದರೆ ಸ್ವಾತಂತ್ರ್ಯದ ಹಾನಿ, ಮನೆಯಲ್ಲಿ ಒಡಕು, ಮಿತಿಮೀರಿದ ಖರ್ಚು ಇತ್ಯಾದಿ. ತನ್ನ ಗಂಡನ ಮೇಲೆ ಹಿಡಿತ ಸಾಧಿಸುವದು ಹೆಂಡತಿಯ ಮುಖ್ಯ ಉದ್ದೇಶವಾಗಿರುತ್ತದೆ ಎಂಬುದು ಅನೇಕರ ಅಭಿಪ್ರಾಯ. ಅಲ್ಲದೇ ಗಂಡನ ಸ್ನೇಹಿತರು, ಬಂಧುಗಳು ಒಳ್ಳೆಯವರಾಗಿದ್ದರೂ ಅವರನ್ನು ತನ್ನ ಗಂಡನಿಂದ ದೂರವಿಟ್ಟು ಗಂಡನು ತಾನು ಹೇಳಿದಂತೆ ಕೇಳುವ ಹಾಗೆ ಮಾಡುವದು ಆಕೆಗೆ ಒಂದು ಸಾಧನೆ. ಸಣ್ಣ ಸಣ್ಣ ವಿಷಯಗಳನ್ನೂ ದೊಡ್ಡದಾಗಿ ಮಾಡಿ ಎಲ್ಲವನ್ನೂ ಇನ್ನೊಬ್ಬರ ಮುಂದೆ ಹೇಳಿ ರಂಪ ಮಾಡುವದು ಕೆಲವರ ಸ್ವಭಾವ. ಹೆಂಡತಿಯ ಇನ್ನೊಂದು ಸ್ವಭಾವ ಎಂದರೆ ತೋರಿಕೆಗಾಗಿ ದುಂದು ವೆಚ್ಚ ಗಂಡನನ್ನು ಪೇಚಿಗೀಡು ಮಾಡುತ್ತದೆ. ತನಗೆ ಬೇಕಾದುದನ್ನು ಪಡೆಯಲು ಆಕೆ ಅಳುವದು, ಅಸಹಕಾರ ಮುಂತಾದ ವಿಧಾನಗಳನ್ನು ಬಳಸುತ್ತಾಳೆ. ಹೆಂಡತಿಗೆ ತನ್ನ ಬಳಗದವರೆಂದರೆ ಮಾತ್ರ ಇಷ್ಟ. ಗಂಡನನ್ನು ಕೇವಲ ಅವರೆಡೆಗೆ ಕರೆದೊಯ್ಯುವದು ಅವರನ್ನು ಮಾತ್ರ ಮನೆಗೆ ಬಂದಾಗ ಸರಿಯಾಗಿ ನೋಡಿಕೊಳ್ಳುವದು ಕೂಡ ಆಕೆಯ ಒಂದು ಸ್ವಭಾವ ಆಗಿರುತ್ತದೆ.

ಹಾಗೆಂದು ಹೆಣ್ಣೇ ಒಂದು ಮದುವೆಯ ದುರಂತಕ್ಕೆ ಕಾರಣವಲ್ಲ. ಹೆಂಡತಿಯನ್ನು ಪೀಡಿಸುವ ಗಂಡಂದಿರೂ ಇದ್ದಾರೆ. ಎಲ್ಲ ಕಡೆಯೂ ಎರಡೂ ರೀತಿಯ ಉದಾಹರಣೆಗಳು ದೊರಕುತ್ತವೆ. ಒಟ್ಟಿಗೆ ಮದುವೆಯಾದ ಮೇಲೆ ಸುಖ ಜೀವನ ಒಂದು ದೈವವೇ. ಇಬ್ಬರಲ್ಲಿ ಒಬ್ಬರು ಇನ್ನೊಬ್ಬರನ್ನು ಪೀಡಿಸುವದು ಸಾಮಾನ್ಯವಾಗಿರುತ್ತದೆ.

ಆದ್ದರಿಂದ ಮದುವೆ ಎಂದರೆ ಒಂದು ಲಾಟರಿಯೇ ಸರಿ. ಜೀವನ ಸಂಗಾತಿ ಸರಿಯಾಗಿದ್ದರೆ ಸರಿ, ಇಲ್ಲದಿದ್ದರೆ ಜೀವನವಿಡೀ ನರಕಯಾತನೆ ಅನುಭವಿಸಬೇಕಾಗುತ್ತದೆ.

ಸುಖಮಯ ವಿವಾಹಿತ ಜೀವನಕ್ಕಾಗಿ ಈ ಕೆಲವು ವಿಷಯಗಳು ಸಹಾಯಕವಾಗಬಹುದು–

* ಇನ್ನೊಬ್ಬರ ಸ್ವಾತಂತ್ರ್ಯವನ್ನು ಗೌರವಿಸುವುದು.
* ನೈತಿಕ ಮೌಲ್ಯಗಳನ್ನು ಅನುಸರಿಸುವುದು.
* ಪ್ರೇಮ ಮತ್ತು ಸ್ನೇಹದಿಂದ ಬಾಳುವುದು.
* ತಾಳ್ಮೆ ಮತ್ತು ತ್ಯಾಗದ ಜೀವನ.
* ಇನ್ನೊಬ್ಬರಿಂದ ಅತಿ ನಿರೀಕ್ಷೆಗಳನ್ನು ಮಾಡದೇ ಇರುವುದು.
* ಪರಸ್ಪರ ಗೌರವ

ಸಧ್ಯದಲ್ಲೇ ಅಥವ ಮುಂದೆ ಮದುವೆಯಾಗುವವರಿಗೆ ನನ್ನ ಶುಭ ಹಾರೈಕೆಗಳು.

ಮೇಲೆ ಹೇಳಿದ ವಿಷಯಗಳು ಅನೇಕ ಜನರು ತಾವು ಹೇಳಿದ ಅಭಿಪ್ರಾಯಗಳ ಮೇಲೆ ಅವಲಂಬಿತವಾಗಿವೆ. ಇದರಲ್ಲಿ ನನ್ನ ವಿಚಾರಗಳೂ ಸ್ವಲ್ಪ ಮಟ್ಟಿಗೆ ಇದ್ದರೂ ಇದು ಒಂದು ಸಾಮಾನ್ಯ ವಿಚಾರಗಳ ಸಂಕಲನವಷ್ಟೇ.

ಎಲ್ಲರಿಗೂ ದೀಪಾವಳಿಯ ಶುಭಾಶಯಗಳು.

ತಮ್ಮ ಮಿತ್ರ
ಲಕ್ಷ್ಮಣ ಕುಲಕರ್ಣಿ.

ವಿ.ಸೂ: ೧. ಲೇಖಕರು ರಕ್ಷಣಾ ಇಲಾಖೆಯಲ್ಲಿ ವಿಜ್ಞಾನಿಗಳಾಗಿ ಕೆಲಸ ಮಾಡುತ್ತಿದ್ದಾರೆ.
೨. ಮೇಲಿನ ಅಭಿಪ್ರಾಯಗಳಿಗೆ ಲೇಖಕರೇ ಜವಾಬ್ದಾರರು.

# ಮಧುರ ನೆನಪುಗಳು

–ಸುಷಮಾ ದೇಸಾಯಿ

ಮರೆಯಲಾಗದು ಎಂದೂ
ಕಳೆದುಹೋದ ಆ ಸವಿನೆನಪುಗಳ
ಸಾಗಲಾರವು ಅವುಗಳಿಲ್ಲದೇ
ಈ ನಿತ್ಯ ಸತ್ಯ ದಿನಗಳು

ಮತ್ತೆ ಸಿಗಲಾರವು ಮುಗಿದು ಹೋದ
ಆ ಪ್ರತಿ ಕ್ಷಣಗಳು
ಮುಗಿಯಲಾರವು ಮುಂದಿರುವ
ಈಗಿನ ಯೋಚನೆಗಳು

ದೂರವಾಗುತ್ತಿವೆ ನನ್ನಿಂದ
ಆ ಕಲ್ಪನಾ ದಿನಗಳು
ಕಳೆದು ಹೋದಂತೆಲ್ಲಾ
ಪ್ರತಿ ಹಗಲಿರುಳುಗಳು

ಭಾಸವಾಗುತ್ತಿದೆ ಕಳೆದು
ಕೊಂಡಂತೆ ಏನೋ
ಭಾರವಾಗುತ್ತಿದೆ ಮನಸು

ನೆನಪಿಸಿಕೊಂಡಾಗ ಏಕೋ

ಮರುಕಳಿಸಲಾಗದೇ ನಿಮಗೆ
ಓ ಬಾಲ್ಯ ದಿನಗಳೇ
ಈ ಮಧುರ ನೆನಪುಗಳೇ
ನಿಮ್ಮ ಕಾಣಿಕೆಗಳೇ?

## ಒಂದು ಕ್ರಾಂತಿಕಾರೀ ವಿಚಾರ

–ಶ್ರೀಕಾಂತ ಮಿಶ್ರಿಕೋಟಿ

ನಾವು ಆಫೀಸಿನ ಸಹೋದ್ಯೋಗಿಗಳು ಒಂದು ದಿನ ಒಟ್ಟಿಗೆ ಆಫೀಸಿಗೆ ಹೊರಟಿದ್ದೆವು . ದಾರಿಯಲ್ಲಿ ಒಂದು ಎಮ್ಮೆಯನ್ನು ಮಲಗಿಸಿ ನಾಲು ಬಡೆಸುತ್ತಿದ್ದರು . ಆಗ ನಮ್ಮಲ್ಲಿ ಹಿರಿಯರಾದ ಒಬ್ಬರು ಒಂದು ವಿಚಾರ ವ್ಯಕ್ತ ಪಡಿಸಿದರು .– "ಅಲ್ಲಾ , ಪ್ರಾಣಿಗಳು ನಾಲ್ಕು ಕಾಲ ಮೇಲೆ ನಡೆಯುವಾಗ , ಮನುಷ್ಯ ಒಬ್ಬನೇ ಏಕೆ ಎರಡು ಕಾಲ ಮೇಲೆ ನಡೆಯಬೇಕು ?. ಅದು ಅನೈಸರ್ಗಿಕ. ನಿಸರ್ಗಕ್ಕೆ , ದೈವ ಸೃಷ್ಟಿಗೆ ವಿರೋಧ"

ನಮಗೆ ಈ ಕ್ರಾಂತಿಕಾರಿ ವಿಚಾರ ಅರಗಿಸಿಕೊಳ್ಳಲು ಸ್ವಲ್ಪ ಸಮಯ ಬೇಕಾಯಿತು. ಅವರು ಹೇಳಿದರು–" ನೋಡಿ ಮನುಷ್ಯನ ಅನೇಕ ಸಮಸ್ಯೆಗಳಿಗೆ ಎರಡು ಕಾಲ ಮೇಲೆ ನಡೆಯುವದೇ ಕಾರಣ . ನೋಡಿ ಎಮ್ಮೆಗೆ ಬಿ.ಪಿ. , ಹೃದಯದ ತೊಂದರೆ ಇದ್ದದ್ದು ಎಲ್ಲಾದರೂ ಕೇಳಿದ್ದೀರಾ ? . ಹೃದಯ ಎರಡು ಪಟ್ಟು ಎತ್ತರಕ್ಕೆ ರಕ್ತವನ್ನು ಪಂಪ್ ಮಾಡಬೇಕಾಗುತ್ತದೆ. ಆದರಿಂದ ಹೃದಯದ ಮೇಲೆ ಒತ್ತಡ ಉಂಟಾಗಿ ಕಾಯಿಲೆಗೆ ದಾರಿ ಯಾಗುತ್ತದೆ. ನಾಲ್ಕು ಕಾಲ ಮೇಲೆ ನಡೆಯುವದರಿಂದ ಮಾನವ ಕುಲದ ಆರೋಗ್ಯ ಸಮಸ್ಯೆಗಳು ತನ್ನಿಂತಾನೇ ಮಾಯವಾಗುತ್ತವೆ" ಎಂದರು .

ನಮಗೆ ಏನೂ ಹೇಳಲು ತೋಚಲಿಲ್ಲ ." . ನಮ್ಮಲ್ಲಿ ಒಬ್ಬರೆಂದರು " ಇರಬಹುದು . ಆದರೆ ಎಲ್ಲಾ ಜನರನ್ನು ಒಪ್ಪಿಸುವದು ಹೇಗೆ ?" ನಮ್ಮ ಕ್ರಾಂತಿಕಾರಿ ವೈಚಾರಿಕರು ಇದನ್ನೂ ವಿಚಾರ ಮಾಡಿದ್ದರು. " ನೋಡಿ ಮೊದಲು ಈ ವಿಷಯದಲ್ಲಿ ಸಂಶೋಧಕರು , ವಿಜ್ಞಾನಿಗಳು ಸುದ್ದಿಯನ್ನು ಮಾಡಬೇಕು . ದೊಡ್ಡ ಪ್ರಮಾಣದಲ್ಲಿ ಪ್ರಚಾರ ಕೈಗೊಳ್ಳಬೇಕು . ಅಂಕಿ ಅಂಶಗಳನ್ನು ಕಲೆ ಹಾಕಿ ಜನರಿಗೆ ಮಾಧ್ಯಮಗಳ ಮೂಲಕ ತಿಳಿ ಹೇಳಬೇಕು. ದೇಶಗಳ ನಾಯಕರು ಈ ಬಗ್ಗೆ ಮೇಲ್ಪಂಕ್ತಿ ಹಾಕಿ ಕೊಡಲು ನಾಲ್ಕು ಕಾಲ ಮೇಲೆ ನಡೆಯಲು ಕೂಡಲೇ ಆರಂಭಿಸಬೇಕು . ನಂತರ ಅವರ ಅನುಯಾಯಿಗಳು , ಆಮೇಲೆ ಇತರ ಜನರು .. ಹೀಗೆ ಇದು ವ್ಯಾಪಿಸಿ ಎಲ್ಲರೂ ನಾಲ್ಕು ಕಾಲ ಮೇಲೆ ನಡೆಯಲು ಆರಂಭಿಸುತ್ತಾರೆ!. "

ನಾವೂ ವಿಚಾರ ಮಾಡಲಾರಂಭಿಸಿದೆವು . ಇದರಿಂದ ಜಗತ್ತಿನ, ದೈನಂದಿನ ಜನಜೀವನದ ಮೇಲೆ ಏನು

ಪರಿಣಾಮ ಆದೀತು ಎಂದೆಲ್ಲ ವಿಭಿನ್ನ ಆಯಾಮಗಳ ಬಗ್ಗೆ ವಿಚಾರ ಶುರು ಆಯಿತು!

" ಅಲ್ಲ , ಮತ್ತೆ ಕೈಗಳು ಮುಂದಿನ ಕಾಲು ಆದವಲ್ಲ!" ಒಬ್ಬರೆಂದರು .
"ಹೌದು , ಆಗ ಡಿಕ್ಷನರಿ ಗಳಲ್ಲಿ 'ಕೈ' ಶಬ್ದಕ್ಕೆ 'ಮುಂದಿನ ಕಾಲು' ಎಂದೇ ವಿವರಣೆ ಇರುತ್ತದೆ. ಅಷ್ಟೇ ಏಕೆ ? ಇತಿಹಾಸದಲ್ಲಿ ಎರಡು ಭಾಗ ಮಾಡುತ್ತಾರೆ– ಎರಡು ಕಾಲಿನ ಯುಗ ಮತ್ತು ನಾಲ್ಕು ಕಾಲಿನ ಯುಗ – ಹೀಗೆ , ಈಗ ಹಳೆಯ ಶಿಲಾಯುಗ ಮತ್ತು ಹೊಸ ಶಿಲಾಯುಗ ಎಂದೆಲ್ಲ ಈಗ ಇರುವ ಹಾಗೆ . ಮತ್ತು ಅಲ್ಲಿ ಬರೀತಾರೆ, ಮನುಷ್ಯ ತನ್ನ ಅಜ್ಞಾನದ ಮೂಲಕ ಎಷ್ಟೋ ಸಹಸ್ರಾರು ವರುಷ ಹಿಂದಿನ ಎರಡು ಕಾಲುಗಳ ಮೇಲೆಯೇ ನಡೆಯುತ್ತಿದ್ದ. ನಂತರ ಅವನಿಗೆ ತಿಳಿವಳಿಕೆ ಬಂದ ಮೇಲೆ ಇಂದಿನ ನಾಲ್ಕೂ ಕಾಲುಗಳ ಮೇಲೆ ನಡೆಯುವ ಪದ್ದತಿಗೆ ಬಂದ ಅಂತ" .

"ಮತ್ತೆ ಕೈಗಳಿಗೂ – ಅಲ್ಲಲ್ಲ ಮುಂದಿನ ಕಾಲ್ಗಳಿಗೂ ಚಪ್ಪಲಿ , ಬೂಟು ಬೇಕಾಗ್ತವೆ. ಬಸ್ಸು , ಮನೆಗಳನ್ನು , ರೀ ಡಿಸೈನ್ ಮಾಡಬೇಕಾಗ್ತದೆ. ಅದರಿಂದ ಉದ್ಯೋಗ ಅವಕಾಶ ಹೆಚ್ಚಿ ನಿರುದ್ಯೋಗ ಸಮಸ್ಯೆ ಪರಿಹಾರವಾಗುತ್ತದೆ " .

ಹೀಗೆಯೇ ವಿಚಾರ ಮಾಡುತ್ತ ಸುತ್ತಣ ಜಗತ್ತಿನ ಬಗ್ಗೆ ಗಮನ ಇಲ್ಲದೆ ನಗುತ್ತ , ಹೊಟ್ಟೆ ನೋಯಿಸಿಕೊಂಡು ಆಫೀಸಿಗೆ ಬಂದೆವು . ಹಾದಿಯ ಜನ ಏನೆಂದುಕೊಂಡರೋ ಏನೊ ?

ಮಧ್ಯಾಹ್ನ ಚಹದ ವೇಳೆಯಲ್ಲಿ ಚಹದ ಕಪ್ಪನ್ನು ಕೈಲ್ಲಿ ಹಿಡಿದ ಒಬ್ಬರು ಒಮ್ಮೆಲೆ ನಗೆಯನ್ನು ತಡೆಯದೆ ಚಹವನ್ನು ಮೈ ಮೇಲೆ ಚೆಲ್ಲಿಕೊಂಡರು – ಏಕೆ ಏನಾಯಿತು ಎಂದು ವಿಚಾರಿಸಿದಾಗ ತಿಳಿಯಿತು . ಒಮ್ಮೆಲೆ ಅವರಿಗೆ ಮುಂಜಾನೆಯ ಚರ್ಚೆ ನೆನಪಿಗೆ ಬಂದು ಮನುಷ್ಯನೂ ಕಾಲಿಗೆ ನಾಲು ಬಡೆಸಿಕೊಳ್ಳುವದಾದರೆ , ಅದು ಹೇಗಿರುತ್ತದೆ ಅಂತ – ಆಗ ಮನುಷ್ಯನನ್ನು ಸಂತೆಯಲ್ಲಿ ದನದ ಹಾಗೆ ಮಲಗಿಸಿ ಕಾಲು ಕಟ್ಟಿ ನಾಲು ಬಡೆಯುವ ದೃಶ್ಯ ಕಲ್ಪಿಸಿ ನಗೆ ತಾಳದವರಾಗಿದ್ದರು.

"ಏನೇ ಆದರೂ ನಿಮಗೆ ಭಾರಿ ಅಧ್ಭುತ ಕ್ರಾಂತಿಕಾರಿ ವಿಚಾರ ಇದೆ , ಬಿಡ್ರಿ " ಎಂದೆವು ಅವರಿಗೆ . " ಅಯ್ಯೋ , ಅದನ್ನೇನು ಕೇಳ್ತಿರಿ ಬಿಡ್ರಿ , ಇನ್ನೂ ಎಷ್ಟೋ ಇಂಥ ವಿಚಾರ ಇವೆ, ಕೇಳುವವರು ಇಲ್ಲ! " ಅಂದು ಅವರು ನಕ್ಕರು . ನಾವು ಕೇಳಲು ತಯಾರು ಇದ್ದೆವು , ಆದರೆ ನಮ್ಮ ದುರದೃಷ್ಟಕ್ಕೆ ಮತ್ತೆ ಅಂಥ ಸದವಕಾಶ ನಮಗೆ ಸಿಕ್ಕಲೇ ಇಲ್ಲ .

## ಇಲ್ಲಾ

– ಅನಂದ್.ಕೋಳೇಕರ್

ನನ್ನ ನಿನ್ನ ಪ್ರೀತಿ
ಸಾಗುತಿದೆ
ದೂರದರ್ಶನದ

ದಾರವಾಹಿಯು
ಸರಣಿಯಂತೆ
ಇದರ ಅಂತ ಗೊತ್ತಿಲ್ಲಾ
ಆದರೆ ನಡು ನಡುವೆ ಬರುವ
ಜಾಹಿರಾತುಗಳಿಗೆ ಕೊನೇಇಲ್ಲಾ

# ಆಶ್ಚರ್ಯ

-ಮಹೇಶ ದೇಶಪಾಂಡೆ

ಕೆಲವು ದಿನಗಳ ಹಿಂದೆ ನಾನು ಒಬ್ಬ ವ್ಯಕ್ತಿಯನ್ನು ಕಂಡೆ, ಅವನು ನನ್ನ ಬಗ್ಗೆ ವಿಚಾರಿಸಿದ ನಂತರ ತನ್ನ ಬಗ್ಗೆ ಹೇಳಿದ "ನನ್ನ ವಿದ್ಯಾಭ್ಯಾಸವೆಲ್ಲ ಮುಗಿದಿದೆ, ನನ್ನ ವಯಸ್ಸು ೩೦ಕ್ಕೆ ಸಮೀಪಿಸಿದೆ, ಆದರೆ ನನಗೆ ಉದ್ಯೋಗ ಪ್ರಾರಂಭಿಸಲು ಮನಸ್ಸಿಲ್ಲ, ಎರಡು ವರ್ಷ ವಿಶ್ರಾಂತಿಯ ನಂತರ ಉದ್ಯೋಗ ಪ್ರಾರಂಭಿಸಬೇಕೆಂದುಕೊಂಡಿದ್ದೇನೆ, ಹೇಗಾದರು ಜೀವನದುದ್ದಕ್ಕೂ ದುಡಿಬೇಕಲ್ಲ!!!!" .
ನನಗೆ ವಿಚಿತ್ರವೆನಿಸಿದರೂ ಸುಮ್ಮನಾದೆ. ಆದರೆ ಮತ್ತೆ ಕೆಲವು ದಿನಗಳ ನಂತರ ಮತ್ತೊಬ್ಬ ಮಹಾನುಭಾವನ ಪರಿಚಯವಾಯಿತು. ಅವನಿಗೆ ೩೨-೩೩ ವಯಸ್ಸಿರಬಹುದು. ಅವನು ಕಳೆದ ೫ ವರ್ಷಗಳಿಂದ ಕನ್ಯಾನ್ವೇಷನೆಯಲ್ಲಿ ತೊಡಗಿದ್ದಾನೆ, ಅವನಿಗೆ ಜೀವನದುದ್ದಕ್ಕೂ ಒಳ್ಳೆಯ ಜೀವನ ನಡುಸುವಂತಹ ಕನ್ಯೆ ಸಿಗುತ್ತಾ ಇಲ್ಲ ಎಂದು ಹೇಳಿದ.

ನನಗೆ ಈ ಎರಡು ಸನ್ನಿವೇಶಗಳು ತಲೆ ಕೆಡಿಸಿದವು. ಇಬ್ಬರೂ ಜೀವನದುದ್ದಕ್ಕೂ ಅಂತ ಹೇಳಿದ್ದರು. ಆಗ ನನಗೆ ನೆನಪಿಗೆ ಬಂದದ್ದು ಯಕ್ಷ ಪ್ರಶ್ನೆ "ಪ್ರಪಂಚದಲ್ಲಿ ಅತ್ಯಂತ ಆಶ್ಚರ್ಯಕರವಾದದ್ದು ಯಾವುದು?" . ಅದಕ್ಕೆ ಧರ್ಮರಾಜ ಉತ್ತರಿಸಿದ್ದು "ಪ್ರತಿಯೊಬ್ಬನು ತಾನು ಚಿರಂಜೀವಿ ಎಂದು ತಿಳಿದುಕೊಂಡಿರುವುದೆ ಪ್ರಪಂಚದಲ್ಲಿ ಅತ್ಯಂತ ಆಶ್ಚರ್ಯಕರವಾದದ್ದು" ಅಂತ. ಈ ಉತ್ತರ ಮೇಲಿನ ಸನ್ನಿವೇಶಗಳಿಗೆ ಹೋಲುತ್ತದೆ. ಜನರು ತಾವು ಚಿರಂಜೀವಿ ಅಂತ ತಿಲಿದುಕೊಂಡಿರದಿದ್ದರೂ ತಾವು ಶತಾಯುಷಿಗಳು ಎಂದು ಖಂಡಿತವಾಗಿ ತಿಲಿದುಕೊಂಡಿದ್ದಾರೆ.
ಈಗಿನ ಕಾಲದಲ್ಲಿ ಜನರು ಶತಾಯುಷಿಗಳಗಲು ಪ್ರಯತ್ನಿಸುವದು ಸಹ ಬಹಳ ಕಷ್ಟವೆಂದು ಅರಿತರು ತಾವು ಶತಾಯುಷಿಗಳರಂತೆ ಜೀವನ ನಡೆಸುತ್ತಿರುವದು ಆಶ್ಚರ್ಯಕರವಾದ್ದು.

ಅನೇಕ ವರ್ಷ (ಶತಮಾನ) ಗಳ ಹಿಂದೆ ಜನರು ಶತಾಯುಷಿಗಳರಿದ್ದರು. ಅವರ ಜೀವನ ಶೈಲಿ ೧೦೦ ವರ್ಷ ಬಾಳಲು ಯೋಗ್ಯವಾಗಿತ್ತು. ಅಂದರೆ ೧೦ ವರ್ಷ ಬಾಲ್ಯ (ಸುಖದ ಜೀವನ), ೧೦ ವರ್ಷ ವಿದ್ಯಾಭ್ಯಾಸ (ಜೀವನೋಪಾಯಕ್ಕಾಗಿ) ನಂತರ ೫೦-೬೦ ವರ್ಷ ಸಫಲ ಜೀವನ ಆಮೇಲೆ ೨೦ ವರ್ಷ ವೃದ್ದಾಫ್ಯ.

ಆದರೆ ಈಗ ಸಾಮಾನ್ಯವಾಗಿ ಮನುಷ್ಯನ ಆಯುಷ್ಯ ೬೦-೭೦ ವರ್ಷ. ಅದರಲ್ಲಿ ಮೊದಲಿನ ೩೦ ವರ್ಷ ವಿದ್ಯಾಭ್ಯಾಸ, ೧೫ ವರ್ಷ ಜೀವನ, ನಂತರ ಉಳಿದ ೧೫-೨೦ ವರ್ಷ ವೃದ್ದಾಫ್ಯ. ಇದನ್ನು ಜನರು ಅರ್ಥ ಮಾಡಿಕೊಂಡಿದ್ದಾರೆಯೆ? ಈ ೬೦-೭೦ ವರ್ಷ ಆಯುಷ್ಯಕ್ಕೆ ಅನುಗುಣವಾಗಿ ತಮ್ಮ ಜೀವನ ಶೈಲಿ

ಬದಲಾಯಿಸಿಕೊಂಡಿದ್ದಾರೆಯೆ? ಇಲ್ಲ!!! ಇನ್ನು ಮನುಷ್ಯ ತಾನು ಶತಾಯುಷಿ ಎಂದೆ ಕಲ್ಪಿಸಿಕೊಂಡು ಜೀವನ ಸಾಗಿಸುತಿದ್ದಾನೆ. ನನಗೆ ತಿಳಿದಂತೆ ಈ ತರಹದ ಜೀವನ ಶೈಲಿಯಿಂದ ಮನುಷ್ಯ ತನ್ನ ಜೀವನದ ಸುಖ ಸವಿಯುವದು ಕಡಿಮೆ.

ಈಗಿನ ಜೀವನ ಶೈಲಿಯಲ್ಲಿಯೊ ಕೂಡಾ ಬಾಲ್ಯ ಇದೆ ಆದರೆ ಬಾಲ್ಯದ ನೈಜ ಸುಖ ಇಲ್ಲ. ಈ ತಾಂತ್ರಿಕ ಯುಗದಲ್ಲಿ ಮಗು ಜನಿಸಿ ಕಣ್ಣು ತೆರೆಯುವದರಲ್ಲಿ ಶಾಲೆಗೆ ಸೇರಿರುತ್ತದೆ. ಇಂತಹ ಸ್ಪರ್ಧಾತ್ಮಕ ಯುಗದಲ್ಲಿ ತಮ್ಮ ಮಕ್ಕಳ ಒಳ್ಳೆಯ ಭವಿಷ್ಯ ರೊಪಿಸಲು ತಂದೆ ತಾಯಿಗಳು ಮಕ್ಕಳ ಬಾಲ್ಯದಿಂದಲೆ ಕಠಿಣ ವಿದ್ಯಾಭ್ಯಾಸ ಒದಗಿಸಲು ಪ್ರಾರಂಭಿಸುತ್ತರೆ. ಇದೇ ಮುಂದುವರೆದು ೩೦ ವರ್ಷಗಳವರೆಗೆ ವಿದ್ಯಾಭ್ಯಾಸದಲ್ಲೆ ಕಾಲ ಕಳೆಯುತ್ತದೆ. ಹೀಗಾಗಿ ಮನುಷ್ಯ ತನ್ನ ಬಾಲ್ಯದ ನೈಜ ಸುಖದಿಂದ ವಂಚಿತನಾಗಿ ತನ್ನ ಜೀವನ ರೊಪಿಸಿಕೊಲ್ಲುವದರಲ್ಲೆ ೩೦ ವರ್ಷ ಕಳೆಯುತ್ತಾನೆ. ಇದೆಲ್ಲಾ ಮಾಡಿದ್ದು ಉಳಿದ ೧೫-೨೦ ವರ್ಷ ಜೀವನ ಸಾಗಿಸಲು, ಆದರೆ ಮನುಷ್ಯನ ಕಲ್ಪನೆ ಮಾತ್ರ ಇದೆಲ್ಲಾ ಮಾಡಿದ್ದು ಉಳಿದ ೬೦-೭೦ ವರ್ಷ ಜೀವನ ಸಾಗಿಸಲೆಂದು.

ಮೊದಲಿನ ಕಾಲದಲ್ಲಿ ೮೦ ವರ್ಷ ಜೀವನಕ್ಕಾಗಿ ೧೦ ವರ್ಷ ವಿದ್ಯಾಭ್ಯಾಸ ಆದರೆ ಈಗ ೩೦ ವರ್ಷ ಜೀವನಕ್ಕಾಗಿ ೩೦ ವರ್ಷ ವಿದ್ಯಾಭ್ಯಾಸ!!!!! ಇದೆಲ್ಲಾ ಈ ತಾಂತ್ರಿಕ ಯುಗದ ಬಂಧನಕ್ಕೆ ಸಿಲುಕಿ ನಡೆಯುತ್ತಿರುವ ಸಂಗತಿ. ಇದನ್ನು ಸರಿಪಡಿಸುವದು ಬಹಳ ಕಠಿಣ, ಆದರೆ ಜನ ತಮ್ಮ ಜೀವನದ ಆಯುಷ್ಯವನ್ನು ಸರಿಯಾಗಿ ಉಪಯೋಗಿಸಿಕೊಂಡು, ಅನಾವಶ್ಯಕವಾಗಿ ತಮ್ಮ ಆಯುಷ್ಯವನ್ನು ವ್ಯರ್ಥ ಮಾಡಿಕೊಳ್ಳದೆ ಜೀವನ ಸಫಲ ಮಾಡಿಕೊಳ್ಳಬೇಕು.

ಇದೆಲ್ಲಾ ಅರ್ಥ ಮಾಡಿಕೊಂಡು, ಜೊತೆಗೆ ಈಗಿನ ಆಹಾರ ಮತ್ತು ತಾಂತ್ರಿಕ ಕೆಲಸಗಳಿಂದ ತನ್ನ ಆಯುಷ್ಯ ಎಷ್ಟು ಕಡಿಮೆ ಆಗುತ್ತಿದೆ ಎಂದು ಅರ್ಥ ಮಾಡಿಕೊಳ್ಳದೆ ತಾವು ಶತಾಯುಷಿಗಳೆಂದು ಕಲ್ಪಿಸಿಕೊಂಡು ಜೀವನ ನಡೆಸುತ್ತಿರುವ ಜೀವನ ಶೈಲಿ ಆಶ್ಚರ್ಯಕರವಲ್ಲವೇ??

## ವಿಧಿ

– ಅನಂದ ಕೋಳೇಕರ

ಬಿಳಿಯ ಹಾಳೆ
ನನ್ನ ಮುಂದಿರಲು
ನಾನು ಬರೆದರೆ
ಹಳೆಯದಾಗುವುದು ಎಂದು
ಬರೆಯದೆ ವಿಧಿ ಇಲ್ಲಾ

ಮೂಡಿಸಲು ಸುಂದರ ಕವಿತೆ
ಇದರಲ್ಲೆ ಅದರ ಸಾರ್ತಕತೆ

# ಅ(ನ)ಂಟು

–ಸುಷಮಾ ದೇಸಾಯಿ

ಜನ್ಮ–ಜನ್ಮದಾ ನಂಟು
"ಮಂತ್ರಿಮಂಡಲ" ಮತ್ತು "ಕೋಲಾಹಲ"
ಗಳ ನಡುವೆ

ಬಿಡಿಸಲಾಗದ ಅಂಟು
"ಮಂತ್ರಿಗಳು" ಮತ್ತು "ಕುರ್ಚಿಗಳ"
ನಡುವೆ

ವರ್ಣಿಸಲಾಗದ ನಂಟು
"ರಾಜಕಾರಣಿಗಳು" ಮತ್ತು "ಹಗರಣಗಳ"
ನಡುವೆ

ಬಿಡಿಸಲಾರದ ಒಗಟು
"ಭಾರತವು" ಮತ್ತು "ಬಡತನಗಳ"
ನಡುವೆ.

# ಮೌಸಾಸುರ ಮರ್ದನ ಪ್ರಸಂಗ

- ಗುರುರಾಜ.ಕೆ.ಕುಲಕರ್ಣಿ.

ಅದೊಂದು ಸುಂದರ ಸೋಮವಾರದ ಮುಂಜಾವು. ಎಲ್ಲರಿಗೂ ಗೊತ್ತಿರುವಂತೆಯೇ ಸೋಮವಾರದ ಮುಂಜಾವು ಸುಂದರವಾಗಿರುವುದು ಬಹಳ ಅಪರೂಪದ ವಿದ್ಯಮಾನ. ನವದಂಪತಿಗಳಿಗಂತೂ ಪ್ರತಿ ಮುಂಜಾನೆಯೂ ಅನಪೇಕ್ಷಿತವಾಗಿರುವುದರಿಂದ, ಅವರಿಗೆ ಈ ಮುಂಜಾನೆ ಖುಶಿ ಕೊಡುವುದು ಸಾಧ್ಯವಿಲ್ಲ. ನನ್ನಂತಹ ಬ್ರಹ್ಮಚಾರಿಗಳಿಗಂತೂ ಅದು ರವಿವಾರದ ಕನಸಿನಂತಹ ಸಂಜೆಯನ್ನು ಪುಡಿ–ಪುಡಿ ಮಾಡಿ , ಕಟು ವಾಸ್ತವವನ್ನು ಕಣ್ಮುಂದೆ ಹಿಡಿಯುವ ಪೆಡಂಭೂತ. ಸಣ್ಣವನಿದ್ದಾಗ ಪ್ರತಿ ಸೋಮವಾರ ಬೆಳಿಗ್ಗೆ ಶಾಲೆಗೆ ಮತ್ತೆ ಹೋಗಲೇಬೇಕಾದಾಗಿನ ಕರಾಳತೆಯೇ ಇನ್ನೂ ಬೇರೆ ವಿಧದಲ್ಲಿ ಮುಂದುವರಿದಿದೆ. ಕಾವೇರಿಯಲ್ಲಿ ಎಷ್ಟೋ ಟಿ.ಎಂ.ಸಿ ನೀರು ಹರಿದು ಹೋಗಿದೆ, ಎಷ್ಟೋ ತಂಟೆ–ತಕರಾರು ಬಂದು ಹೋಗಿವೆ, ಆದರೂ ಸೋಮವಾರದ ಬೆಳಗಿನ ನನ್ನ ದುರ್ಭರತೆಯಂತೂ ಇನ್ನೂ ಮುಂದುವರಿದಿದೆ. ಆದ್ರೆ ಈ particular ಮುಂಜಾನೆ ಸುಂದರವಾಗಿರಲಿಕ್ಕೆ ಕಾರಣ – "ಬಾಸ್ ಬೆಂಗಳೂರಲ್ಲಿಲ್ಲ !!! " ಹರಿಶ್ಚಂದ್ರನ ಕಾಲದ ನಕ್ಷತ್ರಿಕನ upgraded vesrion ಆದ ನಮ್ಮ ಬಾಸು ಆಫ್ಫೀಸಿನಲ್ಲಿ ಇಲ್ಲ ಎಂದರೆ, ನಮಗೆಲ್ಲ ಆಫೀಸು ಸ್ವರ್ಗಕ್ಕೆ ಸಮ. ಇಂತಹ ಸ್ವರ್ಗ–ದಿನದ ಘಟನೆಯನ್ನೇ ನಾನೀಗ ಹೇಳ ಹೊರಟಿದ್ದು.

ಪುರುಂದರದಾಸರ 'ಗಿಳಿಯು ಪಂಜರದೊಳಿಲ್ಲ'ವನ್ನು 'ಬಾಸು ಬೆಂಗಳೂರಲ್ಲಿಲ್ಲ' ಎಂದು ಪ್ಯಾರಡೀಕರಿಸಿ ಗುನುಗುತ್ತ ಆಫ್ಫೀಸಿಗೆ ಬಂದೆ. ಎದುರಿಗೆ ಸಿಕ್ಕವರಿಗೆಲ್ಲ ಮುಗುಳ್ನಗೆ ಮಿಶ್ರಿತ 'ಹಾಯ್ ಒಂದನ್ನು ನೈವಿದ್ಯ ಮಾಡುತ್ತ ನನ್ನ ಸೀಟಿಗೆ ಬಂದೆ. ನನ್ನ ಕಂಪ್ಯುಟರನ್ನು( ಅದನ್ನು ನಾನು ಪ್ರೀತಿಯಿಂದ 'ಕಂಪು' ಅಂತಲೇ ಕರೆಯೋದು.) ಶುರು ಮಾಡಿದೆ. ಆವಾಗ ನೋಡಿದರೆ ನನ್ನ ಮೌಸಿನಿಂದ cursor ಸರಿದಾಡಿಸಲಾಗುತ್ತಿಲ್ಲ ! ಇನ್ನು ಲಾಗಿನ್ ಮಾಡುವುದು ಹೇಗೆ ? ಎಷ್ಟೊಂದು ಕನಸುಗಳಿಟ್ಟುಕೊಂಡು ಬಂದವನಿಗೆ ಎಂಥ ಆಘಾತ ? ಇಂಟರನೆಟ್ ಎಂಬ ಅಗಾಧ ಸಮುದ್ರದಲ್ಲಿ ಮುಂಜಾನೆಯಿಂದ ಸಂಜೆಯವರೆಗೆ ಮನದಣಿಯುವಚಿತೆ ಸರ್ಫ಼ ಮಾಡಬೇಕೆಂದಿದ್ದೆ, ನನ್ನ ಸಿ.ವಿ.ಗೆ ಹೊಸ ರೂಪ ಕೊಡಬೇಕೆಂದಿದ್ದೆ, ಸಹಸ್ರ–ಸಹಸ್ರ ಸಂಖ್ಯೆಯಲ್ಲಿ ನನ್ನ ಇನ್‌ಬಾಕ್ಸಿನಲ್ಲಿ ಬಂದು ಕುಳಿತಿರುವ ಈ–ಮೇಲುಗಳಿಗೆ ಉತ್ತರ ಬರೆಯಬೇಕೆಂದಿದ್ದೆ. ಆದರೆ ಈಗ ? ನಾನೊಂದು ಬಗೆದರೆ ದೈವವೊಂದು ಬಗೆಯಿತು...

ನನ್ನ ದುಃಖ ನನ್ನ ಪಕ್ಕದ ಕ್ಯಾಬಿನಲ್ಲಿ ಕೂಡುವ ಕುಮಾರಿ ಎಂ.ಎಸ್. ಗೆ ಅರ್ಥವಾಯಿತು.(ಎಂ.ಎಸ್. ಎಂದರೆ ಎಂ.ಸುಂದರಿ ಅಂತ, ಮೈಕ್ರೊ-ಸಾಫ್ಟ್ ಅಲ್ಲ! ) ಆಕೆ ಬಂದು ಕಂಟ್ರೋಲ್,ಆಲ್ಟ್, ಶಿಫ್ಟ್ ಗಳೊಂದಿಗೆ ಎಲ್ಲ ಕೀಗಳ permuation/combination ಗಳನ್ನು ಒತ್ತಿದಳು. ಸುಂದರಿಯ ನೀಳ ಬೆರಳುಗಳ ಯಾವ ಚಾಲಿಗೂ ಬಗ್ಗದೆ , cursor ನಿಶ್ಚಲವಾಗೇ ಇತ್ತು. ರಂಭೆ-ಊರ್ವಶಿಯರ ಯಾವ ಆಟಕ್ಕೂ ಸೋಲದ ವಿಶ್ವಾಮಿತ್ರನಂತೆ cursor ಸಮಾಧಿ ಸ್ಥಿತಿಯಲ್ಲಿಯೇ ಇತ್ತು. ಅಹಾ ಅದೇ ಸ್ಥಿರತೆ !! ಅದೇ ಅಚಲತೆ !! ಅದೇ ತನ್ಮಯತೆ !!

ನನ್ನ ಕ್ಯುಬಿಕಲ್ಲಿನಲ್ಲಿ ಕುಮಾರಿ ಎಂ.ಎಸ್. ಇರುವುದನ್ನು ನೋಡಿ, ಹಾಯ್ದು ಹೋಗುತ್ತಿದ್ದ ಲೀನಕ್ಸ್ ಲೀಲಾ ಬಂದಳು. ಈ ಲೀಲಾಳಿಗೆ ಮೈಕ್ರೊಸಾಫ್ಟ ಬಗ್ಗೆ ಸವತಿ ಮಾತ್ಸರ್ಯ, ಲೀನಕ್ಸ್ ಬಗ್ಗೆ ಮಾತೃವಾತ್ಸಲ್ಯ. ಆದ್ದರಿಂದಲೇ ಅವಳ ಹೆಸರಿಗೆ ಲೀನಕ್ಸ್ ಅಂಟಿಕೊಂಡದ್ದು. ಲೀಲಳ ಮುಂದೆಯೂ ಇನ್ನೊಮ್ಮೆ ನನ್ನ ದುಃಖ ನಿವೇದನೆಯಾಯ್ತು. ಆಕೆ ಮೌಸನ್ನು ಅಷ್ಟ ದಿಕ್ಕುಗಳಲ್ಲಿಯೂ ತಿರುಗಿಸಿದಳು. ಪ್ರಯೋಜನ ಶೂನ್ಯ ! ಅಷ್ಟರಲ್ಲಿ ಏನೋ ಹೊಳೆದವಳಂತೆ ನನ್ನನ್ನು ಲೀಲಾ ಕೇಳಿದಳು 'ಯಾವುದು o.s ?' ಅಂಜುತ್ತಲೇ ನಾನು ಉತ್ತರಿಸಿದೆ -''ವಿಂಡೊಸ್-ಎನ್.ಟಿ''. ಲೀಲಾ ಸಮಸ್ಯೆ ಪರಿಹಾರವಾದಂತೆ ಹೇಳಿದಳು -'' ಹಾಗಾದರೆ ಒಂದು ಕೆಲಸ ಮಾಡು. ನಿನ್ನ ಕಂಪ್ಯೂಟರನ್ನು ಮೂರು ಸಲ ಎತ್ತಿ ಕುಕ್ಕು. ತಾನೇ ಸರಿಯಾಗುತ್ತೆ..''. ಲೀಲಾಳ ಪರಿಹಾರ practiacal ಆಗಿರಬಹುದು. ಮೈಕ್ರೊಸಾಫ್ಟ್‌ನ ಇಂಜನೀಯರುಗಳು ಬಹಳಷ್ಟು ಸಮಸ್ಯೆಗಳಿಗೆ ಇದೇ ಪರಿಹಾರವನ್ನು ಕೊಟ್ಟಿರಬಹುದು.ಆದರೆ ಕಳೆದೆರಡು ವರುಷಗಳಿಂದ ನನ್ನ ಕೆಲವು ಸುಖ ಮತ್ತು ಹಲವಾರು ದುಃಖಗಳಲ್ಲಿ ನನ್ನ ಜೊತೆಗಿರುವ ನನ್ನ ಪ್ರೀತಿಯ ಕಂಪುವನ್ನು ಹಾಗೆ ಮಾಡಲು ನನ್ನ ಅಂತಃಕರಣ ಅಡ್ಡ ಬಂದಿತು.

ಲೀಲಾಳ ಮಾತು ಕೇಳಿ, ಎಂ.ಎಸ್.ಳಿಗೆ ಅತೀವ ಸಿಟ್ಟು ಬಂದಿತು. ಅವಳ ಹೆತ್ತ ತಾಯಿಗೆ ಅವಮಾನ ಮಾಡಿದಂತಾಯಿತು. ಆಕೆ ಮೈಕ್ರೊಸಫ್ಟ್‌ನ ವಿಂಡೊಸ್,ವರ್ಡ್, ಎಕ್ಸೆಲ್ ಇತ್ಯಾದಿ ಎಲ್ಲ ಬಂಧು-ಬಳಗಗಳ ಶಕ್ತಿ-ಸೌಂದರ್ಯ-ಕೀರ್ತಿಗಳ ಬಗ್ಗೆ ವೀರಾವೇಶದಿಂದ ಕೊರೆಯತೊಡಗಿದಳು. ಸದಾ ಯುದ್ಧ ಸನ್ನದ್ಧವಾಗಿಯೇ ಇರುವ ಲೀನಕ್ಸ್ ಲೀಲಾಳು ಮೈಕ್ರೊಸಾಫ್ಟ್‌ನ ಎಲ್ಲ ಸಾಫ್ಟ್-ವೇರುಗಳ ಹುಳುಕುಗಳನ್ನು ಹೇಳುತ್ತ counter attack ಶುರು ಮಾಡಿದಳು. ಈ ಇಬ್ಬರು ನಾರಿಯರ ಕದನ ಕೇಳಿಯಲ್ಲಿನನ್ನ ಕಂಪುಗೆ ಏನಾದರೂ ಆದರೆ ಎಂದೂ, ಅದಕ್ಕಿಂತ ಹೆಚ್ಚಾಗಿ ನನ್ನ ಸೊಮವಾರದ ಬೆಳಗಿನ ಸಂಭ್ರಮ ಹೀಗೆ ಹಾಳಗಿ ಹೋಗುತ್ತಿದೆಯಲ್ಲ ಎಂದೂ ನಾನು ಕಳವಳಕ್ಕೊಳಗಾದೆ. ಸಮಸ್ಯೆಗೆ ಏಕೈಕ ಪರಿಹಾರವೆನಿಸಿ, ಸಿಸ್ಟಮ್ ಅಡ್ಮಿನಿಸ್ಟ್ರೇಟರ್ ಚಾಮುಂಡಿಯನ್ನು ಫೋನು ಮಾಡಿ ಕರೆದೆ. ಚಾಮುಂಡಿ ಬಂದ ನಂತರ ಲೀಲಾ-ಸುಂದರಿಯರು ನನ್ನ ಕ್ಯುಬಿಕಲ್ಲಿನಿಂದ ತೆರೆಳಿದರೂ, ಅವರ ವಾದ-ವಿವಾದ ನಡದೇ ಇತ್ತು.

ಸಮಸ್ಯೆಯನ್ನು ನೋಡಿದ ಚಾಮುಂಡಿ, ಸಮಸ್ಯೆ ಇರುವುದು ಈ ಮೌಸಾಸುರನಲ್ಲಿಯೇ ಎಂದು mouse ತೋರಿಸಿದಳು. ನಂತರ ಮೌಸಾಸುರನನ್ನು ಉಲ್ಟಾ ಮಾಡಿ, ಹೊಟ್ಟೆ ಬಗೆದು ಅಲ್ಲಿ ಅಡಗಿದ್ದ ಅಸಂಖ್ಯ ಧೂಳಿನ ಕಣಗಳನ್ನು ಹೊರಗಟ್ಟಿ ಮತ್ತೆ ಜೋಡಿಸಿದಳು. ಈಗ ಹೆಂಡತಿಯ ಕೈಗೊಂಬೆಯಂತಹ ಗಂಡನ ಹಾಗೆ ,cursor ಮೌಸು ಹೇಳಿದ ಹಾಗೆ ಚಲಿಸತೊಡಗಿತು. ಸಮಸ್ಯೆ ಪರಿಹಾರ ಮಾಡಿದ್ದಕ್ಕೆ ನಾನು

ಚಾಮುಂಡಿಗೆ ಅನಂತ ಧನ್ಯವಾದಗಳನ್ನು ಅರ್ಪಿಸಿ, ನನ್ನ ಮಹತ್ಕಾರ್ಯದ ಯೋಜನೆಯ ಮೊದಲ ಕೆಲಸವಾಗಿ ನನ್ನ ಮೈಲ್‌ಬಾಕ್ಸನ್ನು ತೆರೆದೆ. ಅಲ್ಲಿತ್ತು ನನ್ನ ಬಾಸ್ ಕಳುಹಿಸಿದ ವಾರದ to-do ಲಿಸ್ಟು. ಓದುತ್ತ ಓದುತ್ತ ನಾನು ಮೂರ್ಛೆ ಹೋದೆ ...

## ಸಾಗರದಲ್ಲಿ ಹುಟ್ಟು ಹಾಕುವ ಮುನ್ನ........ಕೆಲವು ಪ್ರಶ್ನೆಗಳು!!

–ಗುರುರಾವ ಕುಲಕರ್ಣಿ.

"ಕುಲ್ಕಿ, ಕೊನಿಗರೆ ಬುದ್ಧಿ ಬಂತಲ್ಲಾ ಅಷ್ಟೇ ಸಾಕು. ಈಗೊಂದ ಸ್ವಲ್ಪ ಮನಷ್ಯಾರಾಗ ಜಮಾ ಆದಿ ನೋಡು, ಹ್ಹ ಹ್ಹ ಹ್ಹ.." ಎಂದು ಜಹಗೀರದಾರ ಫ್ಲೋರಿಡಾದ ಮೂಲೆಯಿಂದ ಫೋನಿನಲ್ಲಿ ನಕ್ಕುಬಿಟ್ಟ. ನಗಲ್ಲಿಕ್ಕೆ ಕಾರಣವೇನು? ಯಾರರೇ ಬಂದು
ಅಡ್ಡಿಗ್ಗಿ ಮಾಡಿಟ್ಟು "ಊಟಕ್ಕೇಳ್ತಿರೇನು ಸಾಹೇಬ್ರು ? ಸ್ವಲ್ಪ ದಯಮಾಡಿಸಬೇಕು" ಎನ್ನುವವರೆಗೆ ತನ್ನ ಊಟದ ಚಿಂತೆಯನ್ನೇ ಮಾಡದ ಮಹಾಶಯನೊಬ್ಬ ತನ್ನ ಮದುವೆಯ ಬಗ್ಗೆ ಸೂಚನೆ ಕೊಟ್ಟರೆ ಯಾರು ತಾನೆ ನಗಲ್ಲಿಕ್ಕಿಲ್ಲ ?.

ಇನ್ನೇನು ಇವನು ನಿಜವಾಗಲೂ "ಭೀಷ್ಮ ಪಿತಾಮಹ" ಅಗ್ತಾನೆ ಎಂದೇ ಮಿತ್ರ ಮಂಡಳಿ ಭಾವಿಸಿದ್ದಾಗ "ಇಲ್ಲಾ ನಾನೂ ಮದುವೆಯಾಗಬೇಕೇನೋ ಅಂತ ವಿಚಾರ ಬಂದದ" ಅಂದ್ರೆ ಯಾರಿಗೆ ಆಶ್ಚರ್ಯವಾಗೊಲ್ಲ ? ಯಾರಾದರೂ "ಮದುವೆ ಯಾವಾಗ?" ಅಂತ ಕೇಳಿದ್ರೆ "ಗಡಿಬಿಡಿ ಎನದ ಈಗ ? ಇನ್ನೊಂದು ಸ್ವಲ್ಪ ದಿವ್ಸ
ಆರಾಮಾಗಿ ಇದ್ರಾತು" ಎಂದು ಹೇಳುತ್ತಾ ಹೆದರಿಕೆಯ ಭೂತ ಬಿಟ್ಟು, ಹೊಟ್ಟೆಯುರಿಸುತ್ತಿದ್ದ ವ್ಯಕ್ತಿಯೇ ಬಲೆಗೆ ಬೀಳುವದೆಂದರೆ ? "ತೋಳ ಹಳ್ಳಕ್ಕೆ ಬಿದ್ದಾಗ...... ;–)"

"ಅಂತೂ ಮದ್ವಿ ಅಗೂದಂತು ಗಚ್ಯಾತ, ಈಗ ಹೇಳು ನಿಂಗ ಹೆಂತಾ ಹುಡ್ಗಿ ಬೇಕಂತ" ಜಹಾಗೀರದಾರ ಸೀರಿಯಸ್ ಆಗಿ ಕೇಳಿದ.

"ಅರೆ ಬಾಪರೆ ಇದೇನಿದು? ಏನೋ ಭಾಳ ದಿವ್ಸದ ಮ್ಯಾಲ ಫೋನ್ ಮಾಡ್ಯಾನ ಅಂತ್ಹೇಳಿ ಇದ್ದಿದ್ದು ಹೇಳಿದರ, ಗೊತ್ತಿಲ್ಲದ್ದೂ ಕೇಳೂದ ?" ಒಳ್ಳೆ ಕುತ್ತಿಗ್ಗಿ ಬಂತಲಾ ವ್ಯವಹಾರ ಎಂದುಕೊಂಡೆ.ಸ್ವಲ್ಪ ವಿಚಾರ ಮಾಡಿದಂತೆ ಮಾಡಿ.."ನಂದೇನೂ ಹಂಗೇ /
ಹಿಂಗೇ ಅಂತ ಭಾಳ ಕಂಡಿಶನ್ ಇಲ್ಲಪಾ, ಒಟ್ಟ ನನ್ನಂಗಿದ್ರ ಸಾಕು" ಎಂದೆ.

"ಏಲಿ ಇವ್ನ ಹಾಂಗದ್ರೇನು?. ನಿನ್ನಂಗ ಅಂದ್ರ ?" ಮತ್ತೆ ಪ್ರಶ್ನೆ!. ಖರೇನೆ ಕುತ್ತಿಗ್ಗಿ ಬಂತು ಈ ಪ್ರಶ್ನೆ. ಎಂಥೆಂಥವೋ ಡಿಬೇಟ್ ಗಳಲ್ಲಿ ರೀಲು ಬಿಟ್ಟು ಪ್ರತಿವಾದಿಯನ್ನು ಸುಮ್ಮನಾಗಿಸಿ 'ಕೊರ್ತಾಲಾಜಿ ಪ್ರೊಫೆಸರ್' ಎನ್ನಿಸಿಕೊಂಡ ವ್ಯಕ್ತಿಯ ಬಾಯಿಯೆ ಬಂದ ಆಗುವಂತಹ ಪ್ರಶ್ನೆ !!. ಎನು ಮಾಡಬೇಕು?.

"ನಂಗ ಇಷ್ಟ ವರ್ಷಾ ನೋಡೀ...ನಾ ಹೆಂಗ ಇದ್ದೀನೀಂತ ಗೊತ್ತದಿಲ್ಲೋ ? ಒಟ್ಟನಾಗ ನನ್ನಂಗ ಇರಬೇಕು ಅನಸ್ತದ" ಎಂದುತ್ತರಿಸಿದೆ.

ಆದ್ರೂ ಆಸಾಮಿ ಸಮಾಧಾನ ಆದ್ಹಂಗ ಕಾಣಸ್ಲಿಲ್ಲ. ಸಂಶಯದಿಂದಲೇ ಕೇಳಿದ "ಅಲ್ಲೋ ಡಿಕ್ಟೂ ನಿನ್ನ್ಹಂಗ ಇರವ್ರನ್ನ ಹುಡುಕ್ಯಾಡುದು ಭಾಳ ತ್ರಾಸದ! ಸ್ವಲ್ಪ ಛೆಂದಾಗಿ ಹೇಳು" ಎಂದ.

"ಈಗ ಹ್ಯಾಂಗ ಹೇಳ್ಳೀ ನಾ? ನಿಂಗ ಆಮ್ಯಾಲೆ ಮೇಲ್ ಮಾಡ್ತೀನಿ ತೊಗೊ" ಎಂದ್ಹೇಳಿ ಅದಕ್ಕೆ ಪೂರ್ಣ ವಿರಾಮವಿತ್ತೆ. ಈ ಸಂಭಾಷಣೆಯಾಗಿ ತಿರುಗಿ ೪ ತಿಂಗಳಾಯಿತು, ಇನ್ನೂ ಅವನಿಗೆ ಮೇಲ್ ಕಳಿಸಿಲ್ಲಾ !!. ಅಂದು ಫೋನಿಟ್ಟ ಮೇಲೆ ನಿಜವಾಗಿಯೂ ವಿಚಾರ ಮಾಡಬೇಕಾಯ್ತು. "ಹೌದು, ನನಗೆಂತಹ ಹುಡುಗಿ ಬೇಕು?" ಅತ್ಯಂತ ಕಷ್ಟದ ಪ್ರಶ್ನೆ. ನನ್ನ ಪ್ರಕಾರ ಜಗತ್ತಿನಲ್ಲಿಯೇ ಅತೀ ಕಠಿಣ ಪ್ರಶ್ನೆಗಳಲ್ಲಿ ಇದೂ ಒಂದು !!. ನನ್ನ ಈ ಕಠಿಣ ಪ್ರಶ್ನೆಗೆ ಉತ್ತರ ಹುಡುಕಾಟ ಇನ್ನೂ ನಡೆದಿದೆ !!!.

ನನಗೆಂತವಳು ಬೇಕು ಎನ್ನುವದಕ್ಕಿಂತಲೂ ನಾನು ಎಂತಹ ಆಸಾಮಿ ಎನ್ನುವ ಸ್ವವಿಮರ್ಶೆ ಒಳಿತಲ್ಲವೇ ?. ನಾನೇನೋ ಜಗತ್ತಿನಲ್ಲಿಯೇ ಸಕಲ ಗುಣ ಸಂಪನ್ನ, ರೂಪ, ವಿದ್ಯಾ ಸಂಪನ್ನೆ ಎನ್ನ ಮನದನ್ನೆಯಾಗಬೇಕು ಎಂದು ಬಯಸಬಹುದು!.ಆದರೆ ಅದು ಸಾಧುವೇ ? ಸಾಧ್ಯವೇ ?, ಮೂರ್ಖತನವಲ್ಲದೆ ಮತ್ತೇನು ?.

ಸ್ವಲ್ಪ ಟೈಮ್ ಸಿಕ್ಕರೂ ಸಾಕು 'ನಾಟಕ, ಚರ್ಚೆ, ಉಪನ್ಯಾಸ, ಪ್ರವಚನ, ಗೋಷ್ಠಿ, ಮಿಲನ್, ಬೈಠಕ್' ಎಂದೆಲ್ಲಾ ತಿರುಗುವವನಿಗೆ ಮನೆಯಲ್ಲೇ ಘಟಸ್ಥಾಪನೆ ಮಾಡುವ ಮಹಾಲಕ್ಷ್ಮೀ ಸರಿಯೋ? ಅಥವಾ ಇನ್ನೊರ್ವ ತಿರುಗಲುತಿಪ್ಪಿ ಯೋಗ್ಯವೋ?. ಹೊಸ ಯಾವುದಾದರೂ ಪುಸ್ತಕ / ಮ್ಯಾಗ್‌ರ್ಝೀನ್ ಕಂಡರೆ ತಕ್ಷಣ ತಿರುವಿ ಹಾಕುತ್ತಾ ಸಮಯ ಕಳೆಯುವವನಿಗೆ, ಹುಟ್ಟಾ ಟೆಕ್ಸ್ಟಬುಕ್ ಬಿಟ್ಟು ಇನ್ನೊಂದು ಬುಕ್ ಒದದವಳು ಒಪ್ಪಿಯಾಳೇ? ಕಂಡ ಕಂಡ ವಿಷಯದ ಮೇಲೆ ಭಾಷಣ ಬಿಗಿಯುವ, ಕೈಗೆ ಸಿಕ್ಕ ವಿಷಯದ ಮೇಲೆಲ್ಲಾ ಕೊರೆಯುವ ಮಹಾಕೊರಕನನ್ನು ಯಾವ ಮೌನಗೌರಿ ಸಹಿಸಿಕೊಂಡಾಳು? ನಗರಜೀವನದ ಒರೆಕೋರೆಗಳನ್ನು ಅರಿತೋ(?) / ಅರಿಯದೆಯೋ, ಹಳ್ಳಿಯ ಕೊಂಚ ಹುಂಬತನ, ಮುಗ್ಧತೆಯನ್ನು ಅಳವಡಿಸಿಕೊಂಡಿರುವವನಿಗೆ ಸಿಟಿ ಶಿಸ್ತಿನ ನಾರಿಮಣಿ ಅಚ್ಚರಿಯಿಂದ ನೋಡಲಿಕ್ಕಿಲ್ಲವೇ?. ಸದಾ ಜನರಿಂದ ಗಿಜಿಗುಡುವ ಮನೆ, ಕನ್ನಡ ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿ ಬಾಲ್ಯ ಕಳೆದಿರುವ, ಈಗಲೂ ಫ್ರೇಂಡ್ಸ್, ನಮ್ಮವರು, ಹರಟೆ ಎಂದು ಸಾಯುವವನಿಗೆ ನ್ಯೂಕ್ಲಿಯರ್ ಫ್ಯಾಮಿಲಿಯಿಂದ ಬಂದ ನ್ಯೂಕ್ಲಿಯಸ್ ಜೀವ ತುಂಬಬಹುದೇ?. ಅಥವಾ "ಚಿಕ್ಕ ಕುಟುಂಬ ಸುಖೀ ಕುಟುಂಬ" ಎಂದು ಬಾಹ್ಯ ಜಗತ್ತಿನಿಂದ ಅವನನ್ನು ಕಡಿದು ಹಾಕುವಳೇ ?.

ದುಡ್ಡಿದ್ದಾಗ ಹುಯ್ಯ್ ಎಂದು ಖರ್ಚು ಮಾಡಿ ಇಲ್ಲದಾಗ ಶಂಭೋ ಶಂಕರ ಎನ್ನುವವನಿಗೆ ಲೆಕ್ಕಾಚಾರ ತಜ್ಞೆ ಲೆಕ್ಕದಲ್ಲಿಡಬಲ್ಲಳೆ?. ದೈನಂದಿನ ವೈಯಕ್ತಿಕ ಬೇಕು / ಬೇಡುಗಳ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದಿದ್ದು, ನಾಗರಾಜನ ಕಡೆಯಿಂದ ವಾರದಲ್ಲಿ ಮೂರು ಬಾರಿ ಬೈಯ್ಸಿಕೊಳ್ಳುವವನಿಗೆ ಶಿಸ್ತಿನ ಸಿಪಾಯಿ ಲೇಸೊ? ಅಥವಾ ಅನುಕೂಲ'ಸಿಂಧು' ಸರಿಯೋ?. ಹೊಟ್ಟೆ ಹಸಿದಾಗ ಏನೋ ಒಂದು ತಿಂದು ಸುಮ್ಮನಾಗುವ ಆಲಸಿಗೆ, ಇನ್ನೊರ್ವ ಹಸಿಬಿಸಿ ತಿಂದು ಹೊಂದಿಕೊಳ್ಳುವ ವ್ಯಕ್ತಿ ಮುಖ್ಯವೋ? ಅಥವಾ ನಿಯಮ ಬದ್ಧ ಆಹಾರತಜ್ಞೆಯೋ?. ಪರಂಪರೆ, ಸಂಸ್ಕೃತಿ, ಧರ್ಮ ಇವುಗಳ ಕೊಂಚವಾದ್ರೂ ಅರಿವಿರುವವನಿಗೆ ಕಟ್ಟಾ ಕಮ್ಯೂನಿಷ್ಟ್ ಹೊನ್ದಿಕೊಂಡಾಳೇ?!!.

'ಇದ್ದಾಗ ಎತ್ತಿಕೊಟ್ಟು ಇಲ್ಲದಾಗ ಬೇಡುವವನಿಗೆ' ಸ್ವಲ್ಪ ಕಂಜೂಸ್ ರಾಣಿ ಯೋಗ್ಯಳೋ? ಮತ್ತೊಬ್ಬ ಉದಾರಿ ಸರಿಯೇ?.ಅಥವಾ ವ್ಯವಹಾರ ನಿಪುಣೆ ಉತ್ತಮವೋ? ಈ ಪ್ರಶ್ನೆಗಳ ಹನುಮನ ಬಾಲಕ್ಕೆ ಕೊನೆಯೇ ಇಲ್ಲವೇನೋ?

ಸಂಸಾರ ಸಾಗರದಲ್ಲಿ ಹುಟ್ಟು ಹಾಕುವ ಮುನ್ನ ಸಹ ಪಯಣಿಗಳಿಂದ, ಸಾಲು ಸಾಲು ಪ್ರಶ್ನೆಗಳಲ್ಲಿ ಕೆಲವಕ್ಕಾದ್ರೂ ಉತ್ತರ ಹುಡುಕುವದು ಸರಿಯಲ್ಲವೇ? ಆದರೇನು ಮಾಡುವದು ನನ್ನ ಅಲ್ಪಮತಿಗೆ ಸಮಂಜಸ ಉತ್ತರಗಳು ತೋಚುತ್ತಿಲ್ಲ.ತಾವೇನಾದರೂ ಸಹಾಯ ಮಾಡಿದರೆ ,,,,,ಅನಂತ ದನ್ಯವಾದಗಳು.

# ನನ್ನ ವೃದ್ಧ ಮಿತ್ರ

-ಆನಂದತೀರ್ಥ ಗುತ್ತಲ

ಹೆಸರಿಗೆ ಮಾತ್ರ ಇವ ನನ್ನ ಮಿತ್ರ
ಇವನ ವಿಚಾರಗಳೋ ಬಲು ವಿಚಿತ್ರ ||ಪ||

ಸ್ವಚ್ಛತೆಯಲ್ಲಿ ಅವನು ಭೀಷ್ಮ ಕಶ್ಯಪ
ಮನೆ ತೊಳೆಯದ ದಿನಗಳು ಬಲು ಅಪರೂಪ
ನಾನೊಮ್ಮೆಯೂ ಕೈಗೊಡಿಸಿಲ್ಲ ಅದವನ ಪಾಪ
ದಿನವೂ ಹಾಕುವನು ನನಗೆ ಹಿಡಿಶಾಪ ||೧||

ಭವಿಷ್ಯದ ಚಿಂತೆಯಿಂದ ಮನವು ಅಲ್ಲೊಲ ಕಲ್ಲೊಲ
ಈಗೀಗ ತಿಳಿದದ್ದು, ಮನವಲ್ಲಾ ದೇಹವೂ ಸಡಿಲ
ಮಂಗಳಾರತಿಯಿಂದ ದೇಹೋಷ್ಣವೇ ಬದಲು
ತೀರ್ಥದಿಂದ ಜುಮ್ಮೆಂದವು ಹಲವು ಕೃತ್ರಿಮ ಹಲ್ಲು ||೨||

ಅಜ್ಜ ಎಂಬುದು ಇವನ ಪ್ರೀತಿಯ ಹೆಸರು
ಮನದನ್ನೆಯ ಹುಡುಕಿ ಹುಡುಕಿ ಬಂದಿದೆ ಬೇಜಾರು
ಸಂಸಾರ ನಡೆಸಲು ತಂದಿಹನು ಫ್ರಿಜ್ಜು ಕಾರು
ಮೊರೆಯಿಡುವೆ ಹರಿಯೆ ಇವನಿಗೆ ದಯೆ ತೋರು ||೩||
( ಈ ಕವನ ಕವಿಯ ಅತ್ಯಂತ ಪ್ರೀತಿಯ ಮಿತ್ರ ಮತ್ತು ರೂಮ್ ಮೇಟ್
ಶಂಕರನಾರಾಯಣಗೆ ಅರ್ಪಣೆ)

## ಕೇಳ್ರಪ್ಪೋ ಕೇಳ್ರಿ

-ಮಹೇಶ ದೇಶಪಾಂಡೆ.

ಕಿವಿಗೊಟ್ಟು ಕೇಳ್ರಿ...ಲಕ್ಷಕೊಟ್ಟು ಕೇಳ್ರಿ....ಈ ವರ್ಷ ಎಸ್.ಡಿ.ಎಂ. ಕಾಲೇಜಿನ ಕನ್ನಡ ವೇದಿಕೆ ೩-ಬಳಗದಲ್ಲಿ ನಡೆದ ಘಟನೆಗಳ ವರದಿ ಹೇಳಲಿಕ್ಕತ್ತಿವಿ..ಮೈಯೆಲ್ಲಾ ಕಿವಿಯಾಗಿ ಕೇಳ್ರಿ....

೧.ಸಾವಿರಕ್ಕೂ ಹೆಚ್ಚು ಈ-ಮೇಲ್‌ಗಳ ಮುಖಾಂತರ ಮಾತುಕತೆ.

೨.ಹದಿನೈದು ಸಲ ಸಫಲ ಗೆಟ್ ಟುಗೆದರ್[4] !

೩.ವೇದಿಕೆ ಬಳಗದ ಮೂವರು ಮಿತ್ರರು ಗೃಹಸ್ಥಾಶ್ರಮಕ್ಕೆ ಪಾದಾರ್ಪಣೆ.

-ಶಾಂತಿಕಾ ಹೆಗಡೆ.

-ನಾಗರಾಜ ಜೋಶಿ.[5]

-ಸುಷಮಾ ದೇಸಾಯಿ.[6]

೪.'ಒಂದು ಹುಡುಗ ಮತ್ತು ಹುಡುಗಿ ಕೇವಲ ಮಿತ್ರರಾಗಿರಲು ಸಾಧ್ಯವೇ?' ಎಂಬ ವಿಷಯದ ಮೇಲೆ ಎಲ್ಲರ ಅಭಿಪ್ರಾಯದ ಸಾಗರವೇ ಹರಿದು ಬಂದು ದಾಖಲೆ.

೫.ಮೊಟ್ಟಮೊದಲ ಬಾರಿಗೆ ಸ್ಪಂದನದ ದೀಪಾವಳಿ ವಿಶೇಷಾಂಕ !!

ಈ ದೀಪಾವಳಿ ಸಂಚಿಕೆಯ ಬಗ್ಗೆ ತಮ್ಮ ಅನಿಸಿಕೆ,ಅಭಿಪ್ರಾಯ,ಟೀಕೆ,ಟಿಪ್ಪಣಿಗಳನ್ನು ದಯವಿಟ್ಟು ಈ-ಮೇಲ್(mailto : spandana_feedback@yahoo.com) ಮಾಡಿ.

---

4,5 & 6 : Please see Kannada Vedike special photos @ http://photos.yahoo.com/bc/spandana_feedback/lst?.dir=/Vedike&.view=t

# ಕನ್ನಡ ವೇದಿಕೆಯ ಮಿತ್ರ ಮಂಡಳಿ

೧.ಅನಂತ ಜಹಗೀರದಾರ (jagi59@hotmail.com)
೨.ಆನಂದ ಕೊಳೇಕರ(anandsmiles@indiatimes.com) ೩.ಗುರುರಾಜ ಗಲಗಲಿ
೪.ಗುರುರಾಜ ಕುಲಕರ್ಣಿ(kul_guru@yahoo.com) ೫.ಹರ್ಷ ಜಹಗೀರದಾರ
೬.ಜೋಶಿ ಭೀಮಸೇನ ೭.ಕರುಣಾಕರ ರೈ(karunarai@yahoo.com)
೮.ಲಕ್ಷ್ಮಣ ಕುಲಕರ್ಣಿ(laxman_kulkarni@hotmail.com)
೯.ಗುರುರಾವ ಕುಲಕರ್ಣಿ(gururao_kulkarni@yahoo.co.in)
೧೦.ಮಂಗಲಾ ಭಟ್(mangalasbhat@rediffmail.com)
೧೧.ಶ್ರೀಕಾಂತ ಮಿಶ್ರಿಕೋಟಿ(mishrikoti_2000@zeenext.com) ೧೨.ನಾಗರಾಜ ಜೋಶಿ
೧೩.ಸುಷಮಾ ದೇಸಾಯಿ(Sushama_desai@rediffmail.com)
೧೪.ವಿವೇಕ ಎಚ್(vivek301175@yahoo.com) ೧೫.ಶಾಂತಿಕಾ ಹೆಗಡೆ
೧೬.ಸುಧೀರ ದೇಶಪಾಂಡೆ ೧೭.ರೂಪಾ ಮಹಿಷಿ ೧೮.ರೂಪಾ ಪಿ.
೧೯.ನಿವೇದಿತಾ ೨೦.ಸಂದೀಪ ೨೧.ವೈಜಯಂತಿ
೨೨.ಆನಂದತೀರ್ಥ ಗುತ್ತಲ (aguttal@yahoo.com)
೨೩.ಶಂಕರನಾರಾಯಣ ಭಟ್
೨೪.ಮಹೇಶ ದೇಶಪಾಂಡೆ ೨೫.ರಾಜೇಶ ಶೆಟ್ಟಿ